ವಿಶ್ವರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 15 ಏಪ್ರಿಲ್ 13, 1986 ಬೆಲೆ 60 ಪೈಸೆ

ಮೇ ದಿನದ ಪ್ರಣಾಳಿಕೆ: ಸಿ. ಐ. ಟಿ. ಯು.

ಶ್ರಮಜೀವಿಗಳ ಆಶೋತ್ತರ ಅಭಿವ್ಯಕ್ತಿಗೊಳಿಸಿ

ಭಾರತದ ಕಾರ್ಮಿಕ ಆಂದೋಲನಕ್ಕೆ ಮೇ ದಿನದ ಕರೆ

ಮೇ ದಿನದ ಶತಮಾನೋತ್ಸವದ ಆಚರಣೆಯ ಸಂದರ್ಭವಾದ ಈ ವರ್ಷ ಸಿ ಐ ಟಿ.ಯು. ವಿಶ್ವದ ಕಾರ್ಮಿಕ ವರ್ಗಕ್ಕೆ, ಎಲ್ಲಾ ಸಮಾಜವಾದೀ ದೇಶಗಳ ಕಾರ್ಮಿಕ ವರ್ಗ ಹಾಗೂ ಜನತೆಗೆ, ನಿರುದ್ಯೋಗ ಹಾಗೂ ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯ ವಿರುದ್ಧ ಹೋರಾಡುತ್ತಿರುವ ಬಂಡವಾಳಶಾಹೀ ದೇಶಗಳ ಕಾರ್ಮಿಕ ವರ್ಗ ಹಾಗೂ ಜನತೆಗೆ, ವಿಶ್ವಾದ್ಯಂತ ರಾಷ್ಟ್ರೀಯ ವಿಮೋಚನಾ ಹೋರಾಟ ನಡೆಸುತ್ತಿರುವವರಿಗೆ ತನ್ನ ಶುಭಾಶಯಗಳನ್ನು ಕೋರುತ್ತದೆ.

ಅಮೆರಿಕಾ ಸಾಮ್ರಾಜ್ಯಶಾಹಿಗಳಿಂದ ತಮ್ಮ ಸ್ವಾಧೀನತೆಗೆ ಬೆದರಿಕೆ ಎದುರಿಸುತ್ತಿದ್ದು, ಬಡತನ ಹಾಗೂ ಹಿಂದುಳಿಕೆಯ ವಿರುದ್ಧ ಹೋರಾಡುತ್ತಿರುವ ಎಲ್ಲಾ ತೃತೀಯ ಜಗತ್ತಿನ ದೇಶಗಳ ಕಾರ್ಮಿಕ ವರ್ಗಕ್ಕೆ ಹಾಗೂ ಜನತೆಗೆ ಸಿ ಐ ಟಿ ಯು ತನ್ನ ಶುಭಾಶಯಗಳನ್ನು ಕಳುಹಿಸುತ್ತದೆ.

ಅಮೆರಿಕಾ [ಯು ಎಸ್] ಸಾಮ್ರಾಜ್ಯಶಾಹಿಗಳು ವಿಶ್ವದ ಮೇಲೆ ಹೊರಿಸುತ್ತಿರುವ ಪರಮಾಣು ಯುದ್ಧದ ಅಪಾಯದ ವಿರುದ್ಧ, ಧೀರ ಸಮರ ನಡೆಸುತ್ತಿರುವ ಎಲ್ಲಾ ಪ್ರಾಮಾಣಿಕ ಜನತೆಗೆ ಕಾರ್ಮಿಕರಿಗೆ, ದುಡಿಯುವ ಜನತೆಗೆ, ಪುರುಷರಿಗೆ ಮತ್ತು ಮಹಿಳೆಯರಿಗೆ ಸಿ.ಐ ಟಿ ಯು. ತನ್ನ ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ.

ಭಾರತೀಯ ಕಾರ್ಮಿಕ ಆಂದೋಲನ ಈ ಉಪಖಂಡದ ಕಾರ್ಮಿಕರಿಗೆ, ಪಾಕಿಸ್ತಾನ, ಬಾಂಗ್ಲಾ ದೇಶ ಶ್ರೀಲಂಕಾದ ಹಾಗೂ ನೇಪಾಳದ ಕಾರ್ಮಿಕರಿಗೆ ತನ್ನ ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ.

ಪಾಕಿಸ್ತಾನ ಹಾಗೂ ಭಾರತದ ನಡುವೆ ಪ್ರಕ್ಷುಬ್ಧತೆ ಹಾಗೂ ಘರ್ಷಣೆಯನ್ನು ಸೃಷ್ಟಿಸುವ ಸಾಮ್ರಾಜ್ಯಶಾಹಿಗಳ ಪ್ರಯತ್ನಗಳನ್ನು ನಮ್ಮೆರಡು ದೇಶಗಳ ಕಾರ್ಮಿಕರು ವಿಫಲಗೊಳಿಸುವರೆಂಬ ಭರವಸೆ ಕಾರ್ಮಿಕ ಆಂದೋಲನಕ್ಕಿದೆ.

ವ್ಯಾಪಕವಾಗಿ ಪಸರಿಸಿರುವ ಸಂಕುಚಿತ ಭಾವನೆಯ ನಡುವೆಯೂ ಕಾರ್ಮಿಕ ವರ್ಗದ ಐಕ್ಯತೆಯ ಬಾವುಟವನ್ನು ಎತ್ತಿ ಹಿಡಿದಿರುವ ಶ್ರೀಲಂಕಾದ ಕಾರ್ಮಿಕ ವರ್ಗಕ್ಕೆ, ಎಡ ಶಕ್ತಿಗಳಿಗೆ ಹಾಗೂ ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷಕ್ಕೆ ಭಾರತದ ಕಾರ್ಮಿಕ ಆಂದೋಲನ ತನ್ನ ಹಾರ್ದಿಕ ಶುಭಾಶಯಗಳನ್ನು ಕಳುಹಿಸುತ್ತದೆ.

ನಮ್ಮ ಕಾಲದ ಶಾಂತಿ ಆಂದೋಲನದಲ್ಲಿರುವಷ್ಟು ಅಂತರ್ರಾಷ್ಟ್ರೀಯ ಐಕ್ಯತೆ, ಒಂದು ಸಮಾನ ಉದ್ದೇಶಕ್ಕಾಗಿ ಕೋಟಿಗಟ್ಟಲೆ ಜನಗಳ ಒಳಗೊಳ್ಳುವಿಕೆ ಇತ್ತೀಚಿನ ಇತಿಹಾಸದಲ್ಲಿ ಹಿಂದೆಂದೂ ಕಾಣಬಂದಿಲ್ಲ.

[4ನೇ ಪುಟ ನೋಡಿ]

'ಅಲ್ಪ ಲಾಭಕ್ಕಾಗಿ ಜಾತೀಯ ಶಕ್ತಿಗಳೊಡನೆ ಕಾಂಗ್ರೆಸ್ಸಿನ ಸಖ್ಯತೆ'

– ಇ. ಎಂ. ಎಸ್. ನಂಬೂದಿರಿಪಾಡ್

ಸ್ವಾತಂತ್ರ್ಯ ಪಡೆದ 40 ವರ್ಷಗಳ ನಂತರವೂ ಭಾರತದ ಐಕ್ಯತೆಯ ಮೇಲೆ ಆಕ್ರಮಣ ಮಾಡುವ ಧೈರ್ಯ ಛಿದ್ರಕಾರಿ ಶಕ್ತಿಗಳಿಗೆ ಎಲ್ಲಿಂದ ಬಂತು. ಅಲ್ಪ ಲಾಭಕ್ಕಾಗಿ ಜಾತೀಯ ಶಕ್ತಿಗಳೊಡನೆ ಕಾಂಗ್ರೆಸ್ ಸಖ್ಯತೆ ಬೆಳೆಸಿರುವುದರಿಂದಲೇ ಇಂಥ ಸಂದಿಗ್ಧ ಪರಿಸ್ಥಿತಿ ಉಂಟಾಗಿದೆಂದು ಸಿಪಿಐ [ಎಂ] ಪಕ್ಷದ ಪ್ರಧಾನ ಕಾರ್ಯದರ್ಶಿಯವರಾದ ಇ. ಎಂ. ಎಸ್. ನಂಬೂದಿರಿಪಾದ್ ಅವರು ಪುನರ್‌ರಚಿತ ರಾಷ್ಟ್ರೀಯ ಭಾವೈಕ್ಯತಾ ಸಮಿತಿಯಲ್ಲಿ ಭಾಷಣ ಮಾಡುತ್ತಾ, ಆರೋಪಿಸಿದರು. ಕಳೆದ 40 ವರ್ಷಗಳಿಂದ ದೇಶವನ್ನಾಳುತ್ತಿ‍ರುವ ಕಾಂಗ್ರೆಸ್ ಪಕ್ಷ ತನ್ನ ಧೋರಣೆಯನ್ನು ವಿಮರ್ಶಿಸದಿದ್ದರೆ, ತನ್ನ ಘೋರ ತಪ್ಪನ್ನು ಒಪ್ಪಿಕೊಳ್ಳದಿದ್ದರೆ ಈ ಪ್ರಶ್ನೆಗೆ ಉತ್ತರ ಸಿಗಲಾರದು.

ರಾಷ್ಟ್ರೀಯ ಪ್ರಜಾಪ್ರಭುತ್ವ ಮೌಲ್ಯದೊಂದಿಗೆ, ಪೈಪೋಟಿ ನಡೆಸುತ್ತಿರುವ ಜಾತೀಯ ಶಕ್ತಿಗಳಿರುವ ಈ ದೇಶದಲ್ಲಿ ಕಾಂಗ್ರೆಸ್ಸಿನ ಈ ಧೋರಣೆ ರಾಷ್ಟ್ರೀಯ ಮತ್ತು ಪ್ರಜಾಪ್ರಭುತ್ವ ಮೌಲ್ಯದ ವಿರುದ್ಧ ಸಮಶೀಲ ನಾಲುವಂತೆ ಸಹಾಯ ಮಾಡುತ್ತದೆ. ಅಷ್ಟೇ ಅಲ್ಲದೆ ಇಷ್ಟು ವರ್ಷ ಅದು ಅನುಸರಿಸುತ್ತ ಬಂದ ಆರ್ಥಿಕ ಧೋರಣೆಯಿಂದಾಗಿ ದೇಶವನ್ನು ಬಡತನ ಮತ್ತು ನಿರುದ್ಯೋಗದೆಡೆ ತಳ್ಳಿ, ಅವರ ಅಸಮಾಧಾನ ಛಿದ್ರಕಾರಿ ರೂಪ ತಾಳುವಂತೆ ಉಪಯೋಗಿಸಿಕೊಳ್ಳಲು ಜಾತೀಯವಾದಿಗಳಿಗೆ ಅವಕಾಶ ಮಾಡಿಕೊಟ್ಟಿದೆ. ಸರಿಯಾದ ಶಿಕ್ಷಣ ನೀತಿಯಿಂದ ಸೈದ್ಧಾಂತಿಕವಾಗಿ ಈ ಶಕ್ತಿಗಳನ್ನೆದುರಿಸಲು ವಿಫಲಗೊಂಡಿರುವುದರಿಂದಲೇ ಹಿಂಸಾಕೃತ್ಯಗಳಿಗೆ ಅವು ಫಲಪ್ರದ ನೆಲೆಗಳಾದವು. ಇದರಿಂದಲೇ ದೇಶವನ್ನು ಅಭದ್ರಗೊಳಿಸಬೇಕೆಂದಿರುವ ವಿದೇಶಿ ಶಕ್ತಿಗಳು ದೇಶದಲ್ಲಿ ಬಿಕ್ಕಟ್ಟುಂಟು ಮಾಡಲು ಈ

[8ನೇ ಪುಟ ನೋಡಿ]

ರಾಷ್ಟ್ರೀಯ ಭಾವೈಕ್ಯಕ್ಕಾಗಿ ಶ್ರಮಿಸೋಣ

ಆರ್ ಎಸ್ ಎಸ್, ಹಿಂದೂ ಮಹಾ ಸಭಾ, ವಿಶ್ವ ಹಿಂದೂ ಪರಿಷತ್ ಜಮಾಯತ್ ಏ ಇಸ್ಲಾಂ, ಮುಸ್ಲಿಂ ಲೀಗ್, ಶಿವಸೇನೆ ಮೊದಲಾದ ಜಾತೀವಾದೀ ಕೋಮು ಶಕ್ತಿಗಳು ದೇಶದ ನಾನಾ ಭಾಗಗಳಲ್ಲಿ ದಂಗೆ ಎಬ್ಬಿಸಿದಾಗ, ಕೇಂದ್ರ ಸರಕಾರಕ್ಕೆ ರಾಷ್ಟ್ರೀಯ ಭಾವೈಕ್ಯದ ನೆನಪು ಬರುತ್ತದೆ. ರಾಷ್ಟ್ರೀಯ ಭಾವೈಕ್ಯತಾ ಸಮಿತಿ ರಚಿಸಿ ಅಂಥ ದುಷ್ಟ ಶಕ್ತಿಗಳ ವಿರುದ್ಧ ಹೋರಾಡಲು ಕರೆಕೊಡುತ್ತದೆ. 1961ರಿಂದ ಕಳೆದ 25 ವರ್ಷಗಳಲ್ಲಿ ಈಗ ಏಪ್ರಿಲ್ 7 ರಂದು ಕಾಲ್ಕನೆಯ ಪುನರ್‌ರಚಿತ ರಾಷ್ಟ್ರೀಯ ಭಾವೈಕ್ಯ ಸಮಿತಿ ಸಭೆಯನ್ನು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಕರೆದು "ಕೋಮುವಾದವನ್ನು ನಿಗ್ರಹಿಸಿ ಪಂಜಾಬನ್ನು ರಕ್ಷಿಸಲು ಮಹಾತ್ಮಾಗಾಂಧಿಯವರ ಅಹಿಂಸಾತ್ಮಕ ಆಧರಿತ ಸಾಮೂಹಿಕ ಆಂದೋಳನ ನಡೆಸೋಣ" ವೆಂದು ಕೇಳಿಕೊಂಡರು. ಅದೇ ಸಮಯದಲ್ಲಿ "ಕೆಲವು ವಿದೇಶೀಯ ಶಕ್ತಿಗಳು ಪಂಜಾಬಿನ ಉಗ್ರಗಾಮಿಗಳಿಗೆ ಸಕ್ರಿಯ ನೆರವು ನೀಡುತ್ತಿವೆಂಬುದನು" ಒಪ್ಪಿಕೊಂಡಿದ್ದಾರೆ. ಮಾತ್ರವಲ್ಲ "ಪೂಜಾಸ್ಥಳಗಳನ್ನು ವ್ಯಾಪಕವಾಗಿ ಶಸ್ತ್ರಾಸ್ತ್ರ ಸಂಗ್ರಹಣೆಗೆ ಬಳಸುವುದನ್ನು ಮುಂದಳಿ ಪರಿಶೀಲಿಸಬೇಕೆಂದೂ" ಕೇಳಿಕೊಂಡಿದ್ದಾರೆ.

ಸಿ ಪಿ ಐ (ಎಂ) ಪಕ್ಷದ ಪರವಾಗಿ ಈ ಸಭೆಯಲ್ಲಿ ಪಾಲ್ಗೊಂಡಿದ್ದ ಪಕ್ಷದ ಕಾರ್ಯದರ್ಶಿ ಇ ಎಂ ಎಸ್ ನಂಬೂದಿರಿಪಾದ್ ಅವರು ತಮ್ಮ ಭಾಷಣದಲ್ಲಿ ಹೇಳಿದಂತೆ ಸ್ವಾತಂತ್ರ್ಯಾ ನಂತರ ನಮ್ಮ ದೇಶವನ್ನಾಳುತ್ತಾ ಬಂದಿರುವ ಕಾಂಗ್ರೆಸ್ ಸರ್ಕಾರ ತನ್ನ ಅಲ್ಪಹಿತಕ್ಕಾಗಿ ಕೋಮುವಾದಿ ಶಕ್ತಿಗಳನ್ನು ಉಪಯೋಗಿಸಿ ಅವುಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿರುವುದರಿಂದಲೇ ದೇಶದ ಐಕ್ಯತೆಗೆ ಧಕ್ಕೆ ಉಂಟಾಗುತ್ತಿದೆಂದೂ, ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅಂಥ ಶಕ್ತಿಗಳಿಗೆಲ್ಲ ಹಣಸಹಾಯ, ಪ್ರೋತ್ಸಾಹ ನೀಡಿ ಅಸ್ಸಾಂ, ಪಂಜಾಬ್ ಹಾಗೆಯೇ ಬೇರೆಡೆಗಳಲ್ಲಿ ದೇಶವನ್ನು ನಿಶ್ಯಕ್ತಗೊಳಿಸಿ ಅದನ್ನು ವಿಭಜಿಸುವ ಹೊಂಚು ಹೂಡಿರುವುದನ್ನು ಬಹಿರಂಗವಾಗಿಯೇ ಖಂಡಿಸಿದರೆ ಮಾತ್ರ ಅಂಥ ಶಕ್ತಿಗಳನ್ನು ನಾಶಮಾಡಲು ಸಾಧ್ಯವೆಂದು ಸ್ಪಷ್ಟ ನುಡಿದಿದ್ದಾರೆ. ದೇಶದ ಸಮಗ್ರತೆಯನ್ನು ಕಾಪಾಡಲು ಕೋಮು ಶಕ್ತಿಗಳನ್ನೂ, ಛಿದ್ರಕಾರಿಗಳನ್ನೂ ಎದುರಿಸಲು ಸಹಾಯ ಕೋರುವ ಕಾಂಗ್ರೆಸ್ ಮತ್ತು ಅದರ ಸರ್ಕಾರ ಅಂಥ ಶಕ್ತಿಗಳ ಮೇಲೆ ಅವಲಂಬಿಸುವ ನೀತಿ ಬಿಟ್ಟುಕೊಡುವ ತನಕ, ಇತರ ಪುರೋಗಾಮಿ, ಜಾತ್ಯಾತೀತ, ಹಾಗೆಯೇ ಎಡಪಕ್ಷಗಳೊಡನೆ ಸೇರಿ, ನಿಸ್ಪೃಹ ದೃಷ್ಟಿಯಿಂದ ನಿಜವಾದ ಉದ್ದೇಶದಿಂದ ಹೋರಾಡುವ ತನಕ ರಾಷ್ಟ್ರೀಯ ಐಕ್ಯತೆಯನ್ನು ಉಳಿಸಲು, ಮತೀಯ-ಛಿದ್ರಕಾರಿ ಶಕ್ತಿಗಳನ್ನೆದುರಿಸಲು ಸಾಧ್ಯವಿಲ್ಲ. ಇ ಎಂ ಎಸ್ ನಂಬೂದಿರಿಪಾದ್ ಅವರು ಹೇಳಿದಂತೆ ರಾಜೀವ ಗಾಂಧಿಯವರು ನಿಜವಾಗಿಯೂ ಜಾತಿಯ ಶಕ್ತಿಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಲು, ಸಂಯುಕ್ತವಾಗಿ ಅವುಗಳ ವಿರುದ್ಧ ಹೋರಾಡಲು ಸಿದ್ಧರಿದ್ದಾರೆಯೇ ಎಂಬ ಪ್ರಶ್ನೆ ಮಹತ್ವದ್ದಾಗಿದೆ. ಇಲ್ಲವಾದರೆ ಅಂಥ ಸಭೆಗಳಿಂದ ಪ್ರಯೋಜನವಿಲ್ಲ. ದೇಶ ಮತ್ತಷ್ಟು ಗಂಡಾಂತರ ಪರಿಸ್ಥಿತಿಯನ್ನೆದುರಿಸಬೇಕಾಗುತ್ತದೆ.

ಪ್ರಾಂತ ರೈತ ಸಂಘದ ರಾಯಚೂರು ಸಮಾವೇಶ ಯಶಸ್ವಿಯಾಗಲಿ

1936ರಲ್ಲಿ ಸ್ಥಾಪನೆಗೊಂಡು ಈ ತಿಂಗಳ ಕೊನೆಗೆ ಪಾಟ್ನಾದಲ್ಲಿ ಸ್ವರ್ಣ ಮಹೋತ್ಸವವನ್ನು ಆಚರಿಸಲಿರುವ ಅಖಿಲ ಭಾರತ ಕಿಸಾನ್ ಸಭೆಯ ಅಂಗ ಸಂಸ್ಥೆಯಾದ ಕರ್ನಾಟಕ ಪ್ರಾಂತ ರೈತ ಸಂಘ ರಾಯಚೂರಿನಲ್ಲಿ ತನ್ನ ಸಮ್ಮೇಳನ ನಡೆಸುತ್ತಿದೆ. ರಾಜ್ಯದ ರೈತಾಪಿ ಜನ, ಕೃಷಿ ಕಾರ್ಮಿಕರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ, ರಾಜ್ಯ ಎದುರಿಸುತ್ತಿರುವ ಭೀಕರ ಬರಗಾಲಕ್ಕೆ ಸಮಂಜಸವಾದ ಪರಿಹಾರಗಳನ್ನು ಕಂಡು ಹಿಡಿದು, ಐವತ್ತು ವರ್ಷಗಳ ದೀರ್ಘ ಪರಂಪರೆ, ಅನುಭವಗಳ ಆಧಾರದಲ್ಲಿ ನಮ್ಮ ರಾಜ್ಯದಲ್ಲೂ ಇನ್ನೂ ಬಲಿಷ್ಠವಾದ ರೈತ, ಕೃಷಿ ಕಾರ್ಮಿಕರ ಸಂಘಟನೆ ಕಟ್ಟಲಿಕ್ಕೆ, ತೀವ್ರತರವಾದ ಹೋರಾಟಗಳನ್ನು ನಡೆಸಲಿಕ್ಕೆ ರಾಯಚೂರು ಸಮ್ಮೇಳನ ಮಾರ್ಗದರ್ಶನ ನೀಡಲೆಂದು ಹಾರೈಸುತ್ತೇವೆ.

ದುಡಿಯುವ ರೈತನಿಗೆ ಭೂಮಿ, ನೀರಾಯಕ್ಕೆ ಅನುಕೂಲತೆ, ಬೆಳೆದ ಬೆಳೆಗೆ ಯೋಗ್ಯ ಬೆಲೆ, ಮೊದಲಾದ ಬೇಡಿಕೆಗಳಿಗಾಗಿ ನಿರಂತರ ಹೋರಾಟ ನಡೆಸುತ್ತ, ಅವುಗಳಿಗೆ ಹೊಸ ರೂಪ ಕೊಟ್ಟು, ಆ ಹೋರಾಟಗಳನ್ನು ಮುಂದುವರಿಸಬೇಕಾಗಿದೆ. ರಾಯಚೂರು ಸಮ್ಮೇಳನ ಅಂಥ ಹೋರಾಟಗಳಿಗೆ ಸರಿಯಾದ ಮಾರ್ಗದರ್ಶನ ನೀಡಿ, ರೈತ ಚಳುವಳಿಯನ್ನು ವಿಸ್ತಾರಗೊಳಿಸಿ ಸಂಘಟನೆಯನ್ನು ಇನ್ನೂ ಹೆಚ್ಚು ಬಲಿಷ್ಠಗೊಳಿಸುತ್ತದೆಂದು ಆಶಿಸುತ್ತೇವೆ

ಆರ್ಥಿಕ ಸಮೀಕ್ಷೆ :

ಏಳನೇ ಪಂಚವಾರ್ಷಿಕ ಯೋಜನೆ....4

ಉತ್ಪಾದನೆ ಮತ್ತು ಉದ್ಯೋಗ

ಆರ್. ಚಂದ್ರ

ನಿರುದ್ಯೋಗ ನಿವಾರಣೆ ಸಾಧ್ಯವೇ ?

ಏಳನೇ ಯೋಜನೆಯಲ್ಲಿ 40 ಮಿ. ಜನರಿಗೆ ಹೊಸ ಉದ್ಯೋಗಾವಕಾಶ ನೀಡಲು ಯೋಜಿಸಲಾಗಿದೆ. ಆದರೆ, ಅದೇ ಅವಧಿಯಲ್ಲಿ ಹೆಚ್ಚು ಕಡಿಮೆ ಅಷ್ಟೇ ಪ್ರಮಾಣದಲ್ಲಿ ಹೊಸ ಉದ್ಯೋಗಾಕಾಂಕ್ಷಿಗಳು ಉದ್ಯೋಗ ಮಾರುಕಟ್ಟೆಗೆ ಬರಲಿರುವರು. ಯೋಜನೆಯು ಹೊಸ ಉದ್ಯೋಗಾವಕಾಶದ ಗುರಿ ಸಾಧಿಸಿದರೂ, ಈಗಿನ ಮಟ್ಟದ ನಿರುದ್ಯೋಗ ಮುಂದುವರಿಯುವುದು !

ಉದ್ಯೋಗ ವಿನಿಮಯಗಳ ಅಂಕಿ ಸಂಖ್ಯೆಗಳಂತೆ, ನಿರುದ್ಯೋಗಸ್ಥರ ಸಂಖ್ಯೆಯು ಒಂದಾದ ಮೇಲೊಂದು ಯೋಜನೆಯ ನಂತರ ಹೆಚ್ಚುತ್ತಲೇ ಇವೆ. ಉದಾ :

	1961	1971	1981	1985
ಒಟ್ಟು ನಿರುದ್ಯೋಗಸ್ಥರು: (ಮಿಲಿಯಗಳಲ್ಲಿ)	1.83	5.10	17.84	25.0
ಒಟ್ಟು ವಿದ್ಯಾವಂತ ನಿರುದ್ಯೋಗಸ್ಥರು (ಮಿಲಿಯಗಳಲ್ಲಿ)	0.59	2.30	9.02	12.0

[ಶೈಲಜಾ ಬಾವಟ್, ಇಕನಾಮಿಕ್ಸ್ ಟೈಂಸ್ : 6-11-85].

120 ಲಕ್ಷ ವಿದ್ಯಾವಂತ ನಿರುದ್ಯೋಗಸ್ಥರಲ್ಲಿ, 68.10 ಲಕ್ಷ ಮೆಟ್ರಿಕ್ ಪಾಸಾದವರು, 29.44 ಲಕ್ಷ ಪಿ.ಯು.ಸಿ ಪಾಸಾದವರು, 20.68 ಲಕ್ಷ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರು (ಮಲ್ಕಂ ಆದಿಶೇಷಯ್ಯ, ಫೈನಾನ್ಸಿಯಲ್ ಎಕ್ಸ್‌ಪ್ರೆಸ್ : 8-11-85). ವಿದ್ಯಾವಂತರ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಯೋಜನೆಯಲ್ಲಿ ಪರಿಣಾಮಕಾರಿ ಕಾರ್ಯಕ್ರಮಗಳೇನೂ ಇಲ್ಲ. ಬದಲು ವಿದ್ಯಾವಂತರ ಸಂಖ್ಯೆಯನ್ನೇ ಕಡಿಮೆ ಮಾಡಲು ಉದ್ಯೋಗವನ್ನು ಪದವಿಯಿಂದ ಪ್ರತ್ಯೇಕಿಸುವ ಹೊಸ ಶಿಕ್ಷಣವನ್ನು ರೂಪಿಸಲಾಗುತ್ತಿದೆ !

ಆರನೇ ಯೋಜನೆಯ ಅವಧಿಯಲ್ಲಿ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಬಹಳ ಮಂದಗತಿಯಲ್ಲಿ ಹೆಚ್ಚಿರುವುದನ್ನು ಗಮನಿಸಬಹುದು, ಮೊದಲ ನಾಲ್ಕು ವರ್ಷಗಳಲ್ಲಿ, 1980-81 ರಿಂದ 1983-84 ರ ಅವಧಿಯಲ್ಲಿ, ಒಟ್ಟು ಉದ್ಯೋಗಸ್ಥರ ಸಂಖ್ಯೆ 228.72 ಲಕ್ಷದಿಂದ 242.90 ಲಕ್ಷಕ್ಕೆ ಏರಿ, ಕೇವಲ 14.18 ಲಕ್ಷದಷ್ಟೇ ಹೆಚ್ಚಾಯಿತು. ಅಂದರೆ, ವಾರ್ಷಿಕ ಉದ್ಯೋಗಾವಕಾಶದ ಸರಾಸರಿ ಏರಿಕೆಯ ದರ ಕೇವಲ ಶೇ 2 ರಷ್ಟು. ಈ ಅಲ್ಪ ಏರಿಕೆಯಲ್ಲಿಯೂ ಸಾರ್ವಜನಿಕ ರಂಗದ ಪಾಲು 9.1 ಲಕ್ಷವಾದರೆ, ಖಾಸಗೀ ರಂಗದಲ್ಲಿ ನಿವ್ವಳ ಉದ್ಯೋಗಸ್ಥರ ಸಂಖ್ಯೆ 1.2 ಲಕ್ಷದಷ್ಟು ಕಡಿಮೆಯಾಗಿದೆ !

ಸಂಘಟಿತ ಕ್ಷೇತ್ರದಲ್ಲಿ, ಹೆಚ್ಚು ಬಂಡವಾಳ ಮೂಲದ ಮತ್ತು ಹ್ಯಾಟೆಕ್ನಾಲಜಿ ಆಧರಿತ ಕೈಗಾರಿಕಾಭಿವೃದ್ಧಿಯಾಗಲಿರುವುದರಿಂದ ಬಂಡವಾಳ ಹೂಡುವಿಕೆ ಮತ್ತು ಉತ್ಪಾದನೆ ಸ್ವಲ್ಪ ಹೆಚ್ಚಿದರೂ ಅದೇ ಪ್ರಮಾಣದಲ್ಲಿ ಉದ್ಯೋಗಾವಕಾಶ ಹೆಚ್ಚಾಗಲಾರದು. ಆಧುನೀಕರಣ, ಕಂಪ್ಯೂಟರ್ ಬಳಕೆಗಳಿಂದ, ವಿದ್ಯುತ್ ಅಭಾವ, ಮಾರುಕಟ್ಟೆಯ ಅಭಾವ, ಏಕಸ್ವಾಮ್ಯದ ವಿಸ್ತರಣೆಗಾಗಿ ತೀವ್ರ ಪೈಪೋಟಿಗಳಿಂದ ಉದ್ಯೋಗಾವಕಾಶ ಮುಂದಿನ ವರ್ಷಗಳಲ್ಲಿ ಸಂಘಟಿತ ಕ್ಷೇತ್ರದಲ್ಲಿ ಇನ್ನೂ ಇಳಿಮುಖವಾಗಲಿದೆ. ಅನಿಯಂತ್ರಿತ ಲಾಕ್ ಔಟ್, ಲೇಆಫ್, ಕ್ಲೋಶರ್‌ಗಳೂ ಉದ್ಯೋಗಾವಕಾಶಗಳನ್ನು ಕಾಂತಿಕಗೊಳಿಸಲಿರುವುವು.

ವಿದ್ಯಾವಂತ ನಿರುದ್ಯೋಗಸ್ಥರಿಗೆ ಸ್ವಯಂ ಉದ್ಯೋಗ ದೊರಕಿಸುವ ಯೋಜನೆ 1983-84 ರಲ್ಲಿ ಪ್ರಾರಂಭಗೊಂಡು ವರ್ಷಕ್ಕೆ ಕೇವಲ 2.5 ಲಕ್ಷ ಜನರಿಗೆ ಉದ್ಯೋಗಾವಕಾಶ ಸಿಗುತ್ತಿದೆ. ಸಂಪನ್ಮೂಲದ ಅಭಾವದಿಂದ ಮತ್ತು ಒಟ್ಟು ಕೈಗಾರಿಕಾ ಅಭಿವೃದ್ಧಿಯ ಮಂದಗತಿಯಿಂದ ಈ ತಾತ್ಕಾಲಿಕ ಕಾರ್ಯಕ್ರಮ ಎಷ್ಟು ಕಾಲ ಮುಂದುವರಿಯುವುದು ಮತ್ತು ಎಷ್ಟು ಜನರಿಗೆ ಉದ್ಯೋಗ ದೊರಕಿಸಲು ಶಕ್ತವಾಗುವುದು ಎಂದು ಹೇಳಲಸಾಧ್ಯ. ನಿರುದ್ಯೋಗ ನಿವಾರಣೆಗೆ ಈ ಯೋಜನೆಯನ್ನು ನಂಬಲಾಗದು.

ಈ ಮೊದಲೇ ಹೇಳಿದಂತೆ, ಸಾವಿರಾರು ಸಣ್ಣ ಕೈಗಾರಿಕಾ ಸಂಸ್ಥೆಗಳು ನಷ್ಟದ ದಾರಿಯಲ್ಲಿವೆ. ಜನರ ಗ್ರಾಹಕ ಶಕ್ತಿ ಕುಸಿಯುತ್ತಿರುವುದರಿಂದ ಖಾದಿ ಮತ್ತು ಗ್ರಾಮೋದ್ಯೋಗಗಳ ವಿಸ್ತರಣೆಯೂ ಕುಂಟುತ್ತಿದೆ. 1983 ರಲ್ಲಿ ಈ ಎರಡು ಕ್ಷೇತ್ರಗಳಲ್ಲಿ ಅನುಕ್ರಮವಾಗಿ 84 ಲಕ್ಷ ಮತ್ತು 35.5 ಲಕ್ಷ ಉದ್ಯೋಗಸ್ಥರಿದ್ದರು. ಈ ಕ್ಷೇತ್ರಗಳಲ್ಲಿಯೂ ಏಳನೇ ಯೋಜನೆಯಲ್ಲಿ ನಿರೀಕ್ಷಿಸಿದಷ್ಟು ಉದ್ಯೋಗ ಹೆಚ್ಚಳ ಸಾಧ್ಯವಾಗಲಾರದು. ಹೊಸ ಆರ್ಥಿಕನೀತಿಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಮೀಸಲಾಗಿರಿಸಿದ ಕ್ಷೇತ್ರಗಳನ್ನೂ ದೊಡ್ಡ ಕೈಗಾರಿಕೆಗಳಿಗೆ ತೆರೆದಿಡಲಾಗಿದೆ. ಲಾಭದಾಯಕವಾದ ಒಟ್ಟೆ ತಯಾರಿಕೆ ಸಂಘಟಿತ ಬಟ್ಟೆ ಗಿರಣಿಗಳಿಗೆ ಬಿಟ್ಟು ಕೊಟ್ಟು, ಹೆಚ್ಚು ವೆಚ್ಚದ ಮತ್ತು ಕಡಿಮೆ ಬೇಡಿಕೆಯ ಬಟ್ಟೆ ಉತ್ಪಾದನೆಯನ್ನು ಕೈಮಗ್ಗಗಳಿಗೆ ಬಿಟ್ಟು ಕೊಡಲಾಗಿದೆ. ಸಣ್ಣ ಕೈಗಾರಿಕೆಗಳು ತೆರಿಗೆ ಹೆಚ್ಚಳ, ಮಾರುಕಟ್ಟೆ ಅಭಾವ ಇತ್ಯಾದಿ ಸಮಸ್ಯೆಗಳಿಂದ ದುರ್ಬಲವಾಗುತ್ತಿದೆ. ಸರಕಾರದ ಪಕ್ಷಪಾತ ಧೋರಣೆಯ ವಿರುದ್ಧ ಇತ್ತೀಚೆಗೆ ದೇಶದ ಎಲ್ಲಾ ಸಣ್ಣ ಕೈಗಾರಿಕಾ ಘಟಕಗಳು "ಭಾರತ್ ಬಂದ್" ಆಚರಿಸಿರುವುದನ್ನು ಇಲ್ಲಿ ಗಮನಿಸ ಬಹುದು.

ಬಡತನ ನಿವಾರಣೆ ಯಾದೀತೆ

ದೇಶದ ಒಟ್ಟು 2600 ಲಕ್ಷ ಉದ್ಯೋಗಾಕಾಂಕ್ಷಿಗಳಲ್ಲಿ ಕೇವಲ 365.5 ಲಕ್ಷ ಜನರಿಗೆ (ಶೇ 14) ಮೇಲಿನ ವಿವಿಧ ಮೂಲಗಳಿಂದ ಉದ್ಯೋಗ ಸಿಕ್ಕಿದರೆ, ಉಳಿದ 2235 ಲಕ್ಷ ಜನರು (ಶೇ 86) ಹೆಚ್ಚಾಗಿ ಹಳ್ಳಿ ಪಟ್ಟಣಗಳ ಬಡಜನರು, ಬಡರೈತರು, ಭೂಹೀನ ಕೃಷಿ ಕಾರ್ಮಿಕರು. ಭೂಸುಧಾರಣೆಯಂತಹ ಮೂಲಭೂತವಾದ ಬದಲಾವಣೆಯಾಗದೆ, ಆಸ್ತಿ ಆದಾಯಗಳ ಮರುವಿತರಣೆಯಾಗದೆ, ಬಡತನ ನಿವಾರಣೆ ಯಾಗಲಾರದು, ನಿರುದ್ಯೋಗ ಸಮಸ್ಯೆ ನೀಗಲಾರದು.

ಬಡತನದ ನಿವಾರಣೆಯ ಸೋಗಿನಲ್ಲಿ ಕೆಲವು ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಅಷ್ಟೆ. ಮೊದಲ ಎರಡು 20 ಅಂಶಗಳ ಆರ್ಥಿಕ ಕಾರ್ಯಕ್ರಮಗಳು ಮತ್ತು ನಂತರದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (ಎನ್ ಆರ್ ಇ ಪಿ), ಗ್ರಾಮೀಣ ಭೂರಹಿತರಿಗೆ ಉದ್ಯೋಗ ಖಾತರಿಯ ಕಾರ್ಯಕ್ರಮ (ಆರ್ ಎಲ್ ಇ ಜಿ ಪಿ) ಮತ್ತು ಸ್ವಉದ್ಯೋಗಕ್ಕಾಗಿ ಗ್ರಾಮೀಣ ಯುವ ಜನರಿಗೆ ತರಬೇತಿ ನೀಡುವ ರಾಷ್ಟ್ರೀಯ ಯೋಜನೆ (ಟಿ ಆರ್ ವೈ ಎಸ್ ಇ ಎಂ) ಈ ಸಾಲಿಗೆ ಸೇರಿದವುಗಳು. ಇವುಗಳ ಸಾಧನೆಗಳನ್ನು ಇಲ್ಲಿ ವಿವರವಾಗಿ ವಿಶ್ಲೇಷಿಸಲು ಆಗುವುದಿಲ್ಲ. ಆದರೆ ಆರನೇ ಯೋಜನೆಯಲ್ಲಿ ಬಡತನ ರೇಖೆಯ ಕೆಳಮಟ್ಟದಲ್ಲಿರುವ ಜನಸಂಖ್ಯೆಯ ಪ್ರಮಾಣ ಶೇ 48ರಿಂದ ಶೇ 37ಕ್ಕೆ ಇಳಿದಿರುವುದೆಂಬ ಸರ್ಕಾರದ ಹೇಳಿಕೆ ಹಾಗೂ ಆಧಾರದಲ್ಲಿ ಏಳನೇ ಯೋಜನೆಯ ಅಂತ್ಯದಲ್ಲಿ ಇದರ ಪ್ರಮಾಣ ಶೇ26ಕ್ಕೆ ಇಳಿಸುವ ಮತ್ತು ಈ ಶತಮಾನದ ಅಂತ್ಯದಲ್ಲಿ ಶೇ 5ಕ್ಕೆ ಇಳಿಸುವ ಗುರಿ ಕೇವಲ ಪ್ರಚಾರಕ್ಕಷ್ಟೆ ಪ್ರಯೋಜನ ! ಪ್ರಾಯಶಃ ಇಲ್ಲಿ ಬಡತನ ನಿವಾರಣೆಯ ಬದಲು ಬಡತನದ ಅರ್ಥ ವ್ಯಾಪ್ತಿಯನ್ನೇ ಬದಲಾಯಿಸಲು ಪ್ರಯತ್ನ ನಡೆದಿರುವುದೇ ಎಂದು ಸಂಶಯಿಸಬೇಕಾಗುವುದು !

ಏಳನೇ ಯೋಜನೆಯಲ್ಲಿ ಎನ್ ಆರ್ ಇ ಪಿ ಮತ್ತು ಆರ್ ಎಲ್ ಇ ಜಿ ಪಿ ಯೋಜನೆಗಳಲ್ಲಿ ಒಟ್ಟು ವರ್ಷಕ್ಕೆ 490 ಮಿ. ಮಾನವ ದಿನಗಳ ಉದ್ಯೋಗಾವಕಾಶ ಒದಗಿಸಲು ಯೋಜಿಸಿದೆ. ಇಷ್ಟು ಪ್ರಮಾಣದಲ್ಲಿ ಆರನೇ ಯೋಜನೆಯಲ್ಲಿಯೂ ಸಾಧಿಸಲಾಗಿದೆ ಎಂದು ಸರ್ಕಾರವೇ ಹೇಳಿಕೊಳ್ಳುತ್ತಿದ್ದಾಗ (ಈ ಸಾಧನೆಯೂ ಸತ್ಯಕ್ಕೆ ದೂರ), ಏಳನೇ ಯೋಜನೆಯಲ್ಲಿ ಗ್ರಾಮೀಣ ಉದ್ಯೋಗಾವಕಾಶದಲ್ಲಿ ಹೆಚ್ಚಳ ಎಲ್ಲಿದೆ ?

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮಕ್ಕೆ (ಎನ್ ಆರ್ ಇ ಪಿ) 1983-84ರಲ್ಲಿ ರೂ. 536ಕೋಟಿ ಮೀಸಲಾಗಿರಿಸಿದ್ದು, ರೂ. 392 ಕೋಟಿ ಮಾತ್ರ ಖರ್ಚುಮಾಡಲಾಗಿತ್ತು. ಆಹಾರ ಧಾನ್ಯ 2.66ಲಕ್ಷ ಟನ್ನು ಮೀಸಲಾಗಿರಿಸಿದ್ದು 1.47ಲಕ್ಷ ಟನ್ ಮಾತ್ರ ಖರ್ಚುಮಾಡಲಾಗಿತ್ತು, ಪರಿಣಾಮವಾಗಿ 322 ಮಿಲಿಯ ದಿನಗಳ ಉದ್ಯೋಗ ಒದಗಿಸಲು ಉದ್ದೇಶಿಸಲಾಗಿದ್ದು, ಕೇವಲ 303 ಮಿ. ದಿನಗಳ ಉದ್ಯೋಗಾವಕಾಶವುಂಟಾಗಿತ್ತು. 1984-85ರಲ್ಲಿ ಈ ಯೋಜನೆಯಲ್ಲಿ ಕೇವಲ 240 ಮಿ. ದಿನಗಳ ಉದ್ಯೋಗಾವಕಾಶ ಉಂಟಾಗಿದೆ ಎಂದು ತಿಳಿದು ಬಂದಿದೆ (ಗ್ರಾಮೀಣ ಅಭಿವೃದ್ಧಿ ಇಲಾಖೆ, ಫೈನಾನ್ಸಿಯಲ್ ಎಕ್ಸ್‌ಪ್ರೆಸ್ 8-11-85), ಸಾಧನೆಯ ಹಿನ್ನೆಲೆಯಲ್ಲಿ ಏಳನೇ ಯೋಜನೆಯು ಗುರಿ ಮುಟ್ಟುವುದು, ವರ್ಷಕ್ಕೆ 490 ಮಿ ದಿನಗಳ ಉದ್ಯೋಗಾವಕಾಶ ಒದಗಿಸುವುದು ಎಷ್ಟು ಕಷ್ಟ ಸಾಧ್ಯ ಎಂದು ತಿಳಿಯುವುದು.

ಗ್ರಾಮೀಣ ಬಡತನ, ನಿರುದ್ಯೋಗ ಕಾರ್ಯಕ್ರಮಗಳಿಗೆ ಸರ್ಕಾರದ ಸಂಪನ್ಮೂಲಗಳ ಕೊರತೆಯಿಂದ ಸಾಕಷ್ಟು ಹಣ ಒದಗಿಸಲಾಗುವುದಿಲ್ಲ. ಆಡಳಿತದ ಅದಕ್ಷತೆಯಿಂದ ಒದಗಿಸಿದಷ್ಟು ಹಣವೂ ಈ ಕಾರ್ಯಕ್ರಮಗಳಿಗೆ ವ್ಯಯವಾಗುವುದಿಲ್ಲ. ಮಧ್ಯವರ್ತಿಗಳ ಹಾಗೂ ಗ್ರಾಮೀಣ ಸ್ಥಾಪಿತ ಹಿತಾಸಕ್ತಿಗಳ ಬಿಗಿ ಹಿಡಿತದಿಂದ ಈ ಕಾರ್ಯಕ್ರಮಗಳಲ್ಲಿ ವ್ಯಯಿಸಿದ ಹಣ ಮತ್ತು ಆಹಾರ ಧಾನ್ಯಗಳು ಸಂಪೂರ್ಣವಾಗಿ ಬಡವರಿಗೆ ಮುಟ್ಟುವುದಿಲ್ಲ. ಹೀಗಿದೆ ಇದರ ವಿಷವರ್ತುಲ !

ಪರ್ಯಾಯ ಮಾರ್ಗ :

ದೆಹಲಿ ಮತ್ತು ಕಲ್ಕತ್ತಾದಲ್ಲಿ 1985 ರ ಮಧ್ಯ ಭಾಗದಲ್ಲಿ ನಡೆದ ಸುಪ್ರಸಿದ್ಧ ಸಮಾಜ ವಿಜ್ಞಾನಿಗಳ ಸಮಾವೇಶಗಳಲ್ಲಿ ಈಗಿನ ಬಂಡವಾಳಶಾಹಿ ಪದ್ಧತಿಯ ಚೌಕಟ್ಟಿನಲ್ಲಿಯೇ ಕೆಲವು ಜನಪರ ಕಾರ್ಯಕ್ರಮಗಳನ್ನು ಆರ್ಥಿಕ ಅಭಿವೃದ್ಧಿ ಸಾಧಿಸಲು, ಕೃಷಿ-ಕೈಗಾರಿಕೆಗಳಲ್ಲಿ ಉತ್ಪಾದನೆ ಮತ್ತು ಉದ್ಯೋಗ ಹೆಚ್ಚಿಸಲು ಕೆಲವು ಪರ್ಯಾಯ ಮಾರ್ಗಗಳನ್ನು ಸೂಚಿಸಿದ್ದಾರೆ. (ಸೋಶಿಯಲ್ ಸೈಂಟಿಸ್ಟ್, ಜುಲೈ - ಆಗಸ್ಟ್, 1985). ಮುಖ್ಯವಾಗಿ : 1. ಬೃಹತ್ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮೂಲಕ ದುಡಿಯುವ ಜನರ ಗ್ರಾಹಕ ಶಕ್ತಿಯನ್ನು ಹೆಚ್ಚಿಸಬೇಕು.

2. ಈ ಮೂಲಕ ಸಾಮೂಹಿಕ ಬಳಕೆಯ ವಸ್ತುಗಳ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಿ, ಕೈಗಾರಿಕಾಭಿವೃದ್ಧಿಗೆ ಉತ್ತೇಜನ ನೀಡಬೇಕು.

3. ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಬೃಹತ್ ಕಾರ್ಯಕ್ರಮಗಳಿಗೆ ಶ್ರೀಮಂತರ ಆಸ್ತಿ-ಆದಾಯಗಳ ಮೇಲೆ ಏರಿಕೆಯ ದರದಲ್ಲಿ ನೇರ ತೆರಿಗೆ ಹೇರಿಸಿ ಹೊಸ ಸಂಪನ್ಮೂಲ ಸಂಗ್ರಹಿಸಬೇಕು. ಸದ್ಯ ರಾಷ್ಟ್ರೀಯ ಆದಾಯದ ಶೇ 20 ರಷ್ಟು ವರ್ಷಕ್ಕೆ ಕಪ್ಪು ಹಣ ಸೃಷ್ಟಿಯಾಗುತ್ತಿದೆ: ಅರ್ಥಾತ್ ಸುಮಾರು ರೂ 30000 ಕೋಟಿ. ಇದರಲ್ಲಿ ಆಸ್ತಿವಂತರ ಲಾಭ, ಬಾಡಿಗೆ ಆದಾಯದ ಪಾಲೇ ಹೆಚ್ಚು. ಕಪ್ಪು ಹಣದ ಮೂರನೇ ಒಂದಂಶದಷ್ಟಾದರೂ ತೆರಿಗೆಯ ರೂಪದಲ್ಲಿ ಸಂಗ್ರಹಿಸಿದರೆ ಸರಕಾರಕ್ಕೆ ರೂ 10000 ಕೋಟಿ ವರ್ಷಕ್ಕೆ ದೊರಕುವುದು. ಗ್ರಾಮೀಣ ಪ್ರದೇಶದ ಶ್ರೀಮಂತ ಭೂ ಮಾಲಕರ ಹಾಗೂ ಶ್ರೀಮಂತ ರೈತರ ಆಸ್ತಿ ಆದಾಯಗಳ ಮೇಲೆ ನೇರ ತೆರಿಗೆ ವಿಧಿಸುವ ಮೂಲಕ ವರ್ಷಕ್ಕೆ ರೂ 700 ಕೋಟಿ ಸಂಗ್ರಹಿಸಬಹುದು.

4. ಸದ್ಯ ಬಡತನ ರೇಖೆಯ ಕೆಳಗೆ 300 ಮಿಲಿಯ ಜನರಿರುವರೆಂದು ಅಂದಾಜು ಮಾಡಲಾಗಿದ್ದು, ಪ್ರತಿ ಕುಟುಂಬಕ್ಕೆ (5 ಜನರ) ತಿಂಗಳಿಗೆ ರೂ 100, ವರ್ಷಕ್ಕೆ ರೂ 1200 ವರಮಾನ ಬರುವಂತೆ ಉದ್ಯೋಗಾವಕಾಶಗಳನ್ನು ಒದಗಿಸಲು ವರ್ಷಕ್ಕೆ ರೂ 10000 ಕೋಟಿ ವಿನಿಯೋಗಿಸಬೇಕು. (1985-86 ರಲ್ಲಿ ರೂ 1239 ಕೋಟಿ, 1986-87 ರಲ್ಲಿ ರೂ 1851 ಕೋಟಿ ಈ ಉದ್ದೇಶಕ್ಕೆ ಮೀಸಲಾಗಿರಿಸಿದ್ದು ಎಷ್ಟು ಗೌಣ ಎಂದು ಗಮನಿಸಬೇಕು. ಜೊತೆಗೇ, ಸರಕಾರದ ದಾಸ್ತಾನಿನಲ್ಲಿರುವ 30 ಮಿ. ಟನ್ ಆಹಾರ ಧಾನ್ಯಗಳನ್ನೂ ಈ ಕಾರ್ಯಕ್ರಮಗಳಿಗೆ ಬಳಸಬೇಕು. ಜನಕೋಟಿ ಅನ್ನ ಇಲ್ಲದೆ ಸಾಯುತ್ತಿರುವಾಗ ಅಕ್ಕಿ ಗೋಧಿ ರಫ್ತು ಮಾಡುವುದನ್ನು ರದ್ದುಗೊಳಿಸಬೇಕು.

5. ಬಡತನ ನಿರುದ್ಯೋಗ ನಿವಾರಣೆಯ ಕಾರ್ಯಕ್ರಮಗಳನ್ನು ಆದಷ್ಟು ವಿಕೇಂದ್ರೀಕರಿಸಬೇಕು. ಪಂಚಾಯತು, ಜಿಲ್ಲಾ ಸಮಿತಿಗಳಿಗೆ ಇವುಗಳನ್ನು ಕಾರ್ಯಗತಗೊಳಿಸುವ ಅಧಿಕಾರ ಕೊಡಬೇಕು. ನೌಕರಶಾಹಿ ಹಾಗೂ ಸ್ಥಾಪಿತ ಹಿತಾಸಕ್ತಿಗಳನ್ನು ದೂರಗೊ

[7ನೇ ಪುಟ ನೋಡಿ]

'ಎಂದೆಂದೂ ಅಣ್ವಸ್ತ್ರ ಪರೀಕ್ಷೆ ಬೇಡ'

-ವಿಶ್ವದ ಜನತೆಯ ಒಕ್ಕೊರಲ ಕೂಗು

ಅಣ್ವಸ್ತ್ರ ಪರೀಕ್ಷೆ ನಡೆಸಿಯೇ ತೀರುತ್ತೇನೆ

– ರೀಗನ್

ಸಮಗ್ರ ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದ ವೊಂದನ್ನು ಚರ್ಚಿಸಿ, ಮುಂದೆ ಎಂದೆಂದೂ ಅಣ್ವಸ್ತ್ರ ಪರೀಕ್ಷೆಯನ್ನು ನಿಲ್ಲಿಸಬೇಕೆಂಬ ಪ್ರಶ್ನೆ ಇಂದು ಜಗತ್ತಿನ ಶಾಂತಿಪ್ರಿಯ ಜನತೆಯ ಮುಂದಿದೆ. ಈ ಬಗ್ಗೆ ಬಿಸಿ ಚರ್ಚೆ ನಡೆಯುತ್ತಿದೆ. ಯೂರೋಪಿನಲ್ಲಿ ಅಣ್ವಸ್ತ್ರ ಪರೀಕ್ಷೆ ನಿಷೇಧಕ್ಕಾಗಿಯೇ ಅಮೇರಿಕ ಹಾಗೂ ಸೋವಿಯೆತ್ ಒಕ್ಕೂಟಗಳ ನಾಯಕರ ಒಂದು ಶೃಂಗ ಸಭೆಯನ್ನು ನಡೆಸಬೇಕು ಎಂದು ಗೊರ್ಬಾಚೆವ್‌ರವರು ಪದೇ ಪದೇ ಸಲಹೆ ಮಾಡಿದ್ದಾರೆ ಅಮೇರಿಕದ ಅಧ್ಯಕ್ಷ ರೀಗನರಿಗೆ ಆಹ್ವಾನ ನೀಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾದುದೆಂದರೆ ಹಿರೋಷಿಮಾದ ಮೇಲೆ ಮೊದಲ ಅಣು ಬಾಂಬ್ ಹಾಕಿ ಲಕ್ಷಾಂತರ ಜನರನ್ನು ಅಮೇರಿಕಾ ಸಂಯುಕ್ತ ಸಂಸ್ಥಾನ ಕೊಂದ ದಿನ ಆಗಸ್ಟ್ 6 ರಿಂದು – 6 ತಿಂಗಳ ಕಾಲ ಯಾವ ಅಣುಪರೀಕ್ಷೆಯನ್ನೂ, ತಮ್ಮ ದೇಶದ ರಕ್ಷಣೆಗೆ ಎಷ್ಟೇ ಹಾನಿಯಾದರೂ, ಸ್ವಯಂ ಸ್ಫೂರ್ತಿಯಿಂದ ತ್ಯಾಗ ಮಾಡುವ ಗೋರ್ಬಾಚೆವ್‌ರವರ ಹೇಳಿಕೆ ಹಾಗೂ ಅಸಂಸ್ಥಾ ಕೂಡ ಇದನ್ನು ಪರಿಪಾಲಿಸುವಲ್ಲಿ ತನ್ನ ಜೊತೆ ಸೇರಬೇಕೆಂಬ ಕರೆ ಅಣ್ವಸ್ತ್ರ ಪರೀಕ್ಷೆಯ ವಿಷಯವನ್ನು ಜಗತ್ತಿನ ಮುಂದೆ ತಂದಿತು. ಜಗತ್ತಿನ ಶಾಂತಿಪ್ರಿಯ ಜನತೆಯ ಬಯಕೆಗೆ ಉತ್ತರವಾದ ಈ ನಿರ್ಧಾರ ಅನೇಕ ರೂಪಗಳಲ್ಲಿ ವಿಶಾಲ ಜನತೆಯನ್ನು ಮತ್ತೆ ಮತ್ತೆ ಅಣ್ವಸ್ತ್ರ ಪರೀಕ್ಷೆಯ ತ್ಯಾಗಕ್ಕೆ ಅಣ್ವಸ್ತ್ರ ರಾಷ್ಟ್ರಗಳನ್ನು ಮುಖ್ಯವಾಗಿ ಅಸಂಸ್ಥಾ (ಯು. ಎಸ್.) ನ್ನು ಒತ್ತಾಯಿಸುತ್ತಿದ್ದಾರೆ. ಜಗತ್ತಿನ

ಮೊದಲ ಅಣುಸ್ಫೋಟ :

ಅಮೇರಿಕಾ	1945
ಸೋವಿಯತ್ ದೇಶ	1949
45–50ರವರೆಗೆ ಅಣುಸ್ಫೋಟಗಳು	
ಅಮೇರಿಕಾ	8
ಸೋವಿಯತ್ ದೇಶ	1

ಎಲ್ಲಾ ಖಂಡಗಳಿಗೆ ಸೇರಿದ ಆರು ರಾಷ್ಟ್ರಗಳು ತಮ್ಮ ಮನವಿಯಲ್ಲಿ ಅಣ್ವಸ್ತ್ರ ಪರೀಕ್ಷೆಯನ್ನು ಪೂರ್ಣವಾಗಿ ಬಿಡಬೇಕೆಂದು ಹಾಗೂ ಈ ಕೆಲಸದಲ್ಲಿ ಅಗತ್ಯ ಪರಿಶೀಲನೆ ಒಪ್ಪಂದಪಾಲನೆಯನ್ನು ಪರೀಕ್ಷಿಸಲು, ಮೂರನೇ ರಾಷ್ಟ್ರಗಳಿಂದ ತಮ್ಮ ಸಹಾಯ ನೀಡಲು ಸಿದ್ಧರಿದ್ದೇವೆ ಎಂದು ಘೋಷಣೆ ಮಾಡಿದರು. ಈ ಮನವಿಯನ್ನು ಸ್ವೀಕರಿಸಿದ ಗೊರ್ಬಾಚೆವ್‌ರವರು ಐದು ಖಂಡಗಳ ಜನತೆಯನ್ನು ಪ್ರತಿನಿಧಿಸುವ ಈ ಮನವಿಯನ್ನು ಸ್ವಾಗತಿಸಿ ಈ ಬೇಡಿಕೆಯನ್ನು ಪೂರೈಸಲು ಸೋವಿಯೆತ್ ಒಕ್ಕೂಟ ಸದಾ ಸಿದ್ಧವಿದೆ. ಅಸಂಸ್ಥಾ ಕೂಡ ಈ ಅಣ್ವಸ್ತ್ರ ಪರೀಕ್ಷಾ ನಿಷೇಧದಲ್ಲಿ ಸೇರಬೇಕು ಎಂದರು ಆದರೆ ಅಸಂಸ್ಥಾ ಆಗಸ್ಟ್ ಆರರಿಂದಲೂ ಈ ಅಣ್ವಸ್ತ್ರ ನಿಷೇಧದಲ್ಲಿ ಜಗತ್ತಿನ ಶಾಂತಿಗಾಗಿ ಒಂದೇ ಒಂದು ಹೆಜ್ಜೆಯನ್ನಾದರೂ ಇಡುವುದರಲ್ಲಿ ವಿಫಲವಾಯಿತು. ಇಡಿ ಜಗತ್ತನ್ನೇ ತನ್ನ ಸ್ವಾಮ್ಯಕ್ಕೊಳಪಡಿಸಿ, ಎಲ್ಲಾ ದೇಶಗಳೂ ತನ್ನ ಲಾಭಕೋರ ತನಕ್ಕೆ ಬಲಿಯಾಗಬೇಕೆಂಬ ನವ ವಸಾಹತು ಶಾಹೀ ಪಿಪಾಸೆಯನ್ನೇ ಮುಂದೆ ಮಾಡುತ್ತಿದೆ. ಜನವರಿ ಒಂದರಂದು ಮುಗಿಯಬೇಕಾಗಿದ್ದ ಸೋವಿಯೆತ್ ಒಕ್ಕೂಟದ ಸ್ವಯಂ ಸ್ಫೂರ್ತಿಯ ನಿಷೇಧವನ್ನು ಮಾರ್ಚ್ 31ರವರೆಗೂ ಮುಂದುವರಿಸಿದರು ಗೋರ್ಬಾಚೆವ್. ಯೂರೋಪಿನ ಸ್ವೀಡನ್, ಗ್ರೀಸ್, ಉತ್ತರ ಅಮೇರಿಕದ ಮೆಕ್ಸಿಕೋ, ▮ಅಮೇರಿಕದ ಅರ್ಜಂಟೈನಾ, ಆಫ್ರಿಕಾದ ಟಾಂಜಾನಿಯಾ, ಏಷ್ಯಾ ಖಂಡದಲ್ಲಿ ಭಾರತ ಮಾಡಿದ ಮನವಿಗೆ ಸೋವಿಯೆತ್ ಪ್ರತಿಕ್ರಿಯೆಯಿದು.

ಮಾರ್ಚ್ 31 ರಂದು, ಈ ಸ್ವಯಂ ಸ್ಫೂರ್ತಿಯ ಅಣ್ವಸ್ತ್ರ ನಿಷೇಧ ಮುಗಿಯುವ ಬಹಳ ಮೊದಲೇ ಜನವರಿ 15 ರಂದು, ಎರಡನೇ ಸಹಸ್ರಾಬ್ಧಿಯನ್ನು ಮುಗಿಸಿ, ಮೂರನೇ ಸಹಸ್ರಾಬ್ಧಕ್ಕೆ ಅಂದರೆ 2001ನೇ ವರ್ಷಕ್ಕೆ) ಮಾನವ ಹೆಜ್ಜೆಯಿಡುವ ಮುನ್ನವೇ ವಿಶ್ವವನ್ನು ಸಂಪೂರ್ಣ ಅಣ್ವಸ್ತ್ರ ರಹಿತವಾಗಿಸುವ ಮೂರು ಹಂತದ ಯೋಜನೆಯನ್ನು ಜಗತ್ತಿನ ಆಶೋತ್ತರಗಳನ್ನು ಪ್ರತಿಬಿಂಬಿಸುವ, ಪರರ ಹಣ ಕೊಳ್ಳೆ ಹೊಡೆಯುವ ದುರಾಸೆಯಿಲ್ಲದ ಸಮಾಜವಾದಕ್ಕೆ ಮಾತ್ರ ಸಾಧ್ಯವಾಗುವ ನಿರ್ಭಿಡೆಯ ಕ್ರಾಂತಿಕಾರಿ ಪ್ರಸ್ತಾಪವನ್ನು ಜಗತ್ತಿನ ಜನತೆಯ ಮುಂದಿರಿಸಿತು ಸೋವಿಯತ್ ಒಕ್ಕೂಟ ಅದರಲ್ಲಿ ಅಣ್ವಸ್ತ್ರದ ನಿರಂತರ ನಿಷೇಧವಲ್ಲದೆ ಇರುವೆಲ್ಲಾ ಅಣ್ವಸ್ತ್ರಗಳನ್ನು ಹಂತ ಹಂತವಾಗಿ ನಾಶಗೊಳಿಸುವ ಯೋಜನೆ ಅಡಕವಾಗಿದೆ.

ಅಲ್ಲದೆ ಮಾರ್ಚ್ 31 ರ ನಂತರವೂ ಅಮೇರಿಕಾ ಎಲ್ಲಿಯವರೆಗೆ ಅಣು ಸ್ಫೋಟ ನಡೆಸುವುದಿಲ್ಲವೋ ಅಲ್ಲಿಯವರೆಗೂ ತನ್ನೆಲ್ಲಾ ಅಣು ಸ್ಫೋಟವನ್ನು ತಡೆಯುತ್ತೇನೆ ಎಂದು ಗೊರ್ಬಾಚೆವ್ ಹೇಳಿದ್ದಾರೆ.

ಈಗ ಅಣ್ವಸ್ತ್ರ ನಿಷೇಧದ ಒಂದೇ ಉದ್ದೇಶಕ್ಕಾಗಿಯೇ ಒಂದು ಶೃಂಗಸಭೆ ನಡೆಸೋಣ ಎಂಬ ಕರೆಗೆ ರೀಗನ್ ನಾನಾ ನೆಪಗಳನ್ನು ಅವರ ದೇಶದ ಜನರೇ ನಂಬಲು ನಿರಾಕರಿಸುತ್ತಿರುವ ನೆಪಗಳನ್ನೊಡ್ಡಿ ಮುಖದಿರುಹಿದ್ದಾರೆ ರೀಗನ್‌ರವರು ನೆವಾಡದಲ್ಲಿ ಭೂಗರ್ಭದಲ್ಲಿ ಅಣ್ವಸ್ತ್ರ ಸ್ಫೋಟವನ್ನು ನಡೆಸಲು ಎಲ್ಲಾ ಸಿದ್ಧತೆ ನಡೆಸಿದ್ದಾರೆ.

ಅಣುಸ್ಫೋಟಗಳು

1945 ರಿಂದ 1985 ರವರೆಗೆ

ಅಮೇರಿಕಾ	799
ಫ್ರಾನ್ಸ್	141
ಬ್ರಿಟನ್	39
ಸಾಮ್ರಾಜ್ಯಶಾಹಿ ದೇಶಗಳು	979
ಸೋವಿಯತ್ ದೇಶ	604
ಚೀನಾ	30

ಯಾರೇನೂ ಹೇಳಿದರೂ ಈ ನೆವಾಡ ಅಣು ಸ್ಫೋಟವನ್ನು ನಡೆಸಿಯೇ ತೀರುತ್ತೇನೆ ಎಂದು ಹೇಳಿದ್ದಾರೆ. 24 ಜನ ನೊಬೆಲ್ ವಿಜ್ಞಾನ ಪಾರಿತೋಷಕ ವಿಜೇತರು ಸಕಾರಣವಾಗಿ, ತರ್ಕಬದ್ಧವಾಗಿ ಮಂಡಿಸಿದ ಮನವಿಗೂ ಬೆಲೆ ಇಲ್ಲವಾಗಿದೆ.

ಎರಡು "ಸೂಪರ್ ಪವರ್" ಗಳು, ಎಂದು ಕ್ರೂರ, ಸಾಮ್ರಾಜ್ಯಶಾಹಿ ಅಮೇರಿಕಾವನ್ನು, ಸಮಾಜವಾದಿ ಶಾಂತಿಪ್ರಿಯ ಸೋವಿಯೆತ್ ಒಕ್ಕೂಟವನ್ನೂ ಒಂದೇ ತಕ್ಕಡಿಗೆ ಹಾಕಿ ಕೂಗುತ್ತಿರುವ ನಮ್ಮ ದೇಶದ ಬಂಡವಾಳಶಾಹಿಗಳು ಯೂರೋಪು, ಆಫ್ರಿಕಾ, ಲ್ಯಾಟಿನ್ ಅಮೇರಿಕಾ, ಏಷಿಯಾಗಳ ಶಾಂತಿಪ್ರಿಯ ಜನತೆಗೂ ತಮ್ಮ ತಪ್ಪು ಅರಿವಾಗತೊಡಗಿದೆ ಶಾಂತಿಪ್ರಿಯರಾರು, ಯುದ್ಧಕೋರರು ಯಾರು ? ವಿನಾಶಕರು ಯಾರು? ಅಭಿವೃದ್ಧಿ ಪರರು ಯಾರು ? ಎಂಬ ಸತ್ಯ, ಜನತೆಯ ಮಿತ್ರರು ಯಾರ ,ಶತ್ರುಗಳು ಯಾರು? ಎಂಬ ಸತ್ಯ ಅರಿವಾಗ ತೊಡಗಿದೆ. ಅಸಂಸ್ಥಾ ಮಿಲಿಟರಿ ಕೈಗಾರಿಕಾ ಮಾಲೀಕರ ನಿಜ ಬಣ್ಣ, ಅಮೇರಿಕಾ ಸಾಮ್ರಾಜ್ಯಶಾಹಿಯ ಪ್ರಜಾಸತ್ತೆ ಪ್ರಿಯ ಮುಖವಾಡದ ಹಿಂದಿನ ಕರಾಳತೆ ಹೊರ ಬೀಳುತ್ತಿದೆ.

"ಇನ್ನೆಂದೂ ಈ ಭೂಮಿಯಲ್ಲಿ ಅಣು ಸ್ಫೋಟಗಳು ಬೇಡ ಬೇಡ" ಎಂಬ ಕೂಗು ಮತ್ತಷ್ಟು ಧೃಢವಾಗಿ, ಗಟ್ಟಿಯಾಗಿ ರೀಗನ ನ ಕಿವಿಗಡಚಿಕ್ಕುವಂತೆ ಮೊರೆಯ ಬೇಕಾಗಿದೆ. ಭಾರತದ ಧ್ವನಿಯೂ ಇದಕ್ಕೆ ಮೊರೆತದ ಭಾಗವಾಗಿ ತನ್ನ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿ ಅಪ್ಪಳಿಸಬೇಕಾಗಿದೆ

ಕೈಗಾರಿಕೆಗಳ ಮುಚ್ಚುವಿಕೆ

(6ನೇ ಪುಟದಿಂದ)

ಸಿ ಐ ಟಿ ಯು ವಿನ ಸ್ವತಂತ್ರ ಚಳುವಳಿ ಬೆಳೆದು ಬರುವುದು ಅತ್ಯಗತ್ಯ ಅದಿಲ್ಲದಿದ್ದರೆ ಸ್ವಯಂ ಸ್ಫೂರ್ತಿಯಿಂದ ಮೂಡಿ ಬರುತ್ತಿರುವ ಚಳುವಳಿಗಳಲ್ಲಿ ಮಧ್ಯಪ್ರವೇಶಿಸಲು ನಮಗೆ ಸಾಧ್ಯವಾಗಲಿಕ್ಕಿಲ್ಲ. ನಾವು ಮಧ್ಯ ಪ್ರವೇಶಿಸದೆ ಕಾರ್ಮಿಕ ಐಕ್ಯತೆ ಕಾಪಾಡಲು ಸಾಧ್ಯವಿಲ್ಲ. ಆದ್ದರಿಂದ ಸ್ವತಂತ್ರ ಚಟುವಟಿಕೆಗಳಿಗೆ ಹೆಚ್ಚು ಗಮನ ಹರಿಸಬೇಕು.

ಅದರ ಜೊತೆಯಲ್ಲಿಯೇ ಸಂಯುಕ್ತ ಚಳುವಳಿಯನ್ನು ಬಲಪಡಿಸಬೇಕು

ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧ ನೀತಿಯ ವಿರುದ್ಧ ಶಾಂತಿಗಾಗಿ ತಮ್ಮ ಚಳುವಳಿ ಮುಂದುವರೆಯಬೇಕು ತನ್ನ ಸರ್ಕಾರದ ವಿದೇಶೀ ಧೋರಣೆಯ ಕುರಿತು ಎಷ್ಟು ಆಸ್ತೆ ವಹಿಸುತ್ತಿದೆ, ಅದರ ಮೇಲೆ ಆ ದೇಶದ ಕಾರ್ಮಿಕ ವರ್ಗದ ಪ್ರೌಢತ್ವ ಕಂಡು ಹಿಡಿಯಬಹುದೆಂದು ಕಾರ್ಲ್‌ಮಾರ್ಕ್ಸ್ ಹೇಳಿದ್ದರು. ಸಾಮ್ರಾಜ್ಯಶಾಹಿ ಯುದ್ಧ ತಯಾರಿಕೆಯನ್ನು ತಡೆ ಹಿಡಿಯಲು ನಮಗೆ ಸಹಾಯಕವಾಗುವ ಚಟುವಟಿಕೆಗಳ ಕುರಿತು ನಾವು ಆಸ್ತೆ ವಹಿಸುತ್ತಿಲ್ಲ. ನಮ್ಮ ದೇಶದ ತಟಸ್ಥ ಧೋರಣೆ ಬದಲಾಯಿಸುವಂತೆ ಒತ್ತಾಯ ಬರುತ್ತಿದೆ. ದೇಶ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಲು ಅದು ಅಗತ್ಯವೆಂದು ಹೇಳಲಾಗುತ್ತಿದೆ. ಅದು ಬಹಳ ಅಪಾಯಕಾರಿ. ಆದ್ದರಿಂದ ದೇಶದ ವಿದೇಶಾಂಗ ನೀತಿಯನ್ನು ಬದಲಾಯಿಸಬೇಕೆಂಬ ಪ್ರಯತ್ನವನ್ನು ಸೋಲಿಸುವುದು, ಯುದ್ಧ ಎದುರಿಸುವುದು, ಶಾಂತಿ ಕಾಪಾಡುವುದು, ನೂರು ವರ್ಷಗಳಲ್ಲಿ ಕಾರ್ಮಿಕ ವರ್ಗದ ಚಳುವಳಿ ಸಾಧಿಸಿದ ಸಾಧನೆಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯ.

(ಮುಂದುವರಿದಿದೆ)

ತುಮಕೂರು ಜಿಲ್ಲಾ ರೈತ ಸಮ್ಮೇಳನ

ದಿನಾಂಕ 6-4-1986 ರಂದು ಮೇಲ್ಕಂಡ ರೈತ ಸಂಘದ ಜಿಲ್ಲಾ ಮಟ್ಟದ ಸಮ್ಮೇಳನವು ಗುಬ್ಬಿ ತಾಲ್ಲೂಕು ಹಾಗಲ್ವಾಡಿ ಹೋಬಳಿ, ಹೊಸಕೆರೆಯಲ್ಲಿ ಕಾಮ್ರೇಡ್ ಟಿ ಕೆ. ಗೋವಿಂದರಾಜುರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಸಲ್ಪಟ್ಟಿತು ಜಿಲ್ಲಾದ್ಯಂತ ಸಮ್ಮೇಳನಕ್ಕೆ 107 ಪ್ರತಿನಿಧಿಗಳು ಆರಿಸಲ್ಪಟ್ಟು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಧ್ವಜಾರೋಹಣವನ್ನು ಕಾಮ್ರೇಡ್ ಉಜ್ಜನಿಯಪ್ಪನವರು ನೆರವೇರಿಸಿದ ನಂತರ, ರೈತ ಕಾರ್ಯಕರ್ತರು, ಪ್ರತಿನಿಧಿಗಳ, ಯುವ ಸಂಘಟನೆಯ ಸದಸ್ಯರ ಮತ್ತು ಮುಖ್ಯ ಅತಿಥಿಗಳನ್ನೊಳಗೊಂಡಂತೆ ರೈತ ಕೃಷಿ ಕೂಲಿಗಾರರ ಮೆರವಣಿಗೆಯು ಹೊಸಕೆರೆ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿದರು.

ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಕಾ। ಪಿ ಜಗನ್ನಾಥ್‌ರವರು ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿದರು.

ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಕಾ। ಹೆಚ್. ಸಿ ಚೆನ್ನಪ್ಪನವರು ವರದಿ ಮಂಡಿಸಿದರು. ವರದಿಯ ಮೇಲೆ ಪುಟ್ಟಶಾಮಯ್ಯ, ಅಂಜಪ್ಪ, ಕೆಂಪಯ್ಯ, ಗುರುಸಿದ್ದಪ್ಪ ಸದಾಶಿವಯ್ಯ, ಮತ್ತು ಡಿ ನಾರಾಯಣಮೂರ್ತಿಗಳು ಮಾತನಾಡಿದ ನಂತರ, ಚರ್ಚೆ ನಡೆದು ಅಂಗೀಕರಿಸಲ್ಪಟ್ಟಿತು.

ನೂತನ ಸಾಲಿನಲ್ಲಿ ಜಿಲ್ಲಾ ಸಮಿತಿಗೆ ಕಾ। ಟಿ ಕೆ ಗೋವಿಂದರಾಜು (ಅಧ್ಯಕ್ಷ), ಕಾ। ಹೆಚ್. ಸಿ. ಚನ್ನಪ್ಪ (ಕಾರ್ಯದರ್ಶಿ), ಪಂಡಿತ ದಾಸಪ್ಪ (ಉಪಾಧ್ಯಕ್ಷ), ಎ ಬಿ ರಾಜಶೇಖರ (ಖಜಾಂಚಿ), ಆಯ್ಕೆಯಾಗಿದ್ದಾರೆ. ಇನ್ನುಳಿದ ಮೂರು ಸದಸ್ಯರನ್ನು ತಿಪಟೂರು, ಶಿರಾ ಮತ್ತು ಕುಣಿಗಲ್ ತಾಲ್ಲೂಕುಗಳಿಂದ ಸೇರ್ಪಡೆ ಮಾಡಿಕೊಳ್ಳಲು ಕಾರ್ಯಕಾರೀ ಸಮಿತಿಗೆ ಅಧಿಕಾರ ಕೊಡಲಾಯ್ತು

ಸಿ. ಐ. ಟಿ. ಯು. ಮೇ ದಿನದ ಪ್ರಣಾಳಿಕೆ

ಭಾರತದ ಶ್ರಮಜೀವಿಗಳ ಆಶೋತ್ತರಗಳಿಗೆ ಅಭಿವ್ಯಕ್ತಿ ನೀಡುವ ಶಕ್ತಿಯಾಗಲು ಕಾರ್ಮಿಕ ಆಂದೋಲನಕ್ಕೆ ಕರೆ

ನೂರು ವರ್ಷಗಳಲ್ಲಿ

ತಮ್ಮ ಕಾರ್ಮಿಕರನ್ನು ಶೋಷಿಸುವುದರಲ್ಲಿ ಯಾವುದೇ ರೀತಿಯ ಮಿತಿಯನ್ನು ಸ್ವೀಕರಿಸಲು ಇನ್ನೂ ನಿರಾಕರಿಸುತ್ತಿದ್ದ ಮಾಲಿಕ ವರ್ಗವನ್ನು ಎಂಟು ಗಂಟೆಗಳ ಕೆಲಸದ ದಿನಕ್ಕಾಗಿ ಒತ್ತಾಯಿಸುವ ಧೈರ್ಯ ತೋರಿದ ಚಿಕಾಗೋ ಕಾರ್ಮಿಕರ ನೆನಪಿಗೆ ಗೌರವ ಸೂಚಿಸಲು ಕಳೆದ ನೂರು ವರ್ಷಗಳಲ್ಲಿ ಪ್ರತಿವರ್ಷವೂ ಕಾರ್ಮಿಕರು ವಿಶ್ವಾದ್ಯಂತ ಬೀದಿಗಿಳಿದು ಬಂದಿದ್ದಾರೆ.

ಅಕಂಸ್ಮಾತ್ ಪೋಲೀಸರು ಗುಂಡು ಹಾರಿಸಿ ಕೊಂದ ಆ ಹುತಾತ್ಮರ ನೆನಪಿಗೆ ಗೌರವ ಸಲ್ಲಿಸಲು ಪ್ರತಿವರ್ಷ ಅವರೆಲ್ಲಾ ಬೀದಿಗಿಳಿದು ಬಂದಿದ್ದಾರೆ.

ಮೇ ದಿನದ ಕೊಲೆಗಳ ಬಗ್ಗೆ ವಿಚಾರಣೆ ಎದುರಿಸಬೇಕಾಗಿ ಬಂದು, ತಲೆಎತ್ತಿ ನೇಣುಗಂಬದತ್ತ ನಡೆದ ಕಾರ್ಮಿಕ ವರ್ಗದ ಮುಂದಾಳುಗಳ ಧೈರ್ಯದ ಸ್ಮರಣೆ ಮಾಡಲು ಪ್ರತಿ ವರ್ಷ ಅವರು ಬೀದಿಗಿಳಿದು ಬಂದಿದ್ದಾರೆ.

ಮೇ ದಿನದ ಆಚರಣೆಗೆ ಮೊದಲು ಯುರೋಪಿನ ಕೆಲವು ದೇಶಗಳಿಗೆ ಮತ್ತು ಅಸಂಸ್ಥಾಕ್ಕೆ ಸೀಮಿತವಾಗಿತ್ತು. ಆದರೆ ಕೆಲವೇ ವರ್ಷಗಳಲ್ಲಿ ಕಾರ್ಮಿಕ ವರ್ಗದ ಐಕ್ಯತೆ ಎಲ್ಲಾ ಖಂಡಗಳಿಗೆ ತಲುಪಲಾರಂಭಿಸಿತು. ಕೆಲಸದ ಅವಧಿಯನ್ನು ಮಿತಿಗೊಳಿಸುವುದು ಮತ್ತು ಇತರ ಬೇಡಿಕೆಗಳೊಂದಿಗೆ ಹೆಚ್ಚೆಚ್ಚು ದೇಶಗಳಲ್ಲಿ ಮೇ ದಿನದ ಆಚರಣೆ ಆರಂಭವಾಯಿತು. ಇಂದು ಮೇ ದಿನವನ್ನು ಎಲ್ಲಾ ಸಮಾಜವಾದೀ ದೇಶಗಳಲ್ಲಿ, ಎಲ್ಲಾ ಮುಂದುವರಿದ ಬಂಡವಾಳಶಾಹೀ ದೇಶಗಳಲ್ಲಿ ಹಾಗೂ ಎಲ್ಲಾ ನವವಿಮೋಚಿತ ದೇಶಗಳಲ್ಲಿ ಆಚರಿಸಲಾಗುತ್ತಿದೆ.

ಪ್ರತಿವರ್ಷ ಮೇ ದಿನದಂದು ತನ್ನದು ಬಂಡವಾಳ ಶಾಹೀ ವ್ಯವಸ್ಥೆಯನ್ನು ಅಂತ್ಯಗೊಳಿಸುವ, ಮಾನವ ಕುಲವನ್ನು ಬಡತನ ಹಾಗೂ ನಿರುದ್ಯೋಗದ ನಿರಂತರ ಶಾಪದಿಂದ ರಕ್ಷಿಸುವ ದೃಢ ನಿರ್ಧಾರ ಮಾಡಿರುವ ಒಂದು ಏಕೀಕೃತ ಸೇನೆ ಎಂಬುದನ್ನು ಕಾರ್ಮಿಕ ವರ್ಗ ಜಾಹೀರು ಪಡಿಸುತ್ತಾ ಬಂದಿದೆ.

ಬಂಡವಾಳಶಾಹಿಗೆ ಹೊಡೆತ

ಕೆಲಸದ ಅವಧಿಯನ್ನು ಕಡಿಮೆ ಮಾಡುವ ಬೇಡಿಕೆಯನ್ನು ಕೂಡಾ ಆಳುವ ವರ್ಗಗಳು ಸಹಿಸಲಾರದಾಗಿದ್ದ ಮೊದಲ ಮೇ ದಿನದ ನಂತರ ನೂರು ವರ್ಷಗಳೊಳಗೇ ಕಾರ್ಮಿಕ ವರ್ಗ ಜನತೆಯ ಬೆಂಬಲದಿಂದ ಹಾಗೂ ಜನತೆಗಾಗಿ ಹೋರಾಡುತ್ತಾ, ಶೋಷಣೆಯ ಕೋಟೆಗಳನ್ನು ಒಂದೊಂದಾಗಿ ನಾಶಗೊಳಿಸುತ್ತಾ ಬಂದು, ಇಂದು ಅದರ ವಿಜಯೀ ಬಾವುಟ ಜಗತ್ತಿನ ಮೂರನೇ ಒಂದು ಭಾಗದಲ್ಲಿ ಹಾರಾಡುತ್ತಿದೆ.

ಲೆನಿನ್ ಹಾಗೂ ಬೋಲ್ಶೆವಿಕ್ ಪಕ್ಷದ ನೇತೃತ್ವದಲ್ಲಿ 1917ರ ಕ್ರಾಂತಿ ಬಂಡವಾಳಶಾಹೀ ಪದ್ಧತಿಗೆ ನೀಡಿದ ಪ್ರಥಮ ಭಾರೀ ಹೊಡೆತ. ಕಾರ್ಮಿಕ ವರ್ಗದ ನೇತೃತ್ವದಲ್ಲಿ, ದುಡಿಯುವ ಜನಗಳ ಬಹುಸಂಖ್ಯಾತರ ಬೆಂಬಲದಿಂದ ಒಂದು ಹೊಸರೀತಿಯ ಪ್ರಭುತ್ವ ಜನ್ಮತಾಳಿತು.

ಸೋವಿಯತ್ ಒಕ್ಕೂಟದ ಕಾರ್ಮಿಕ ವರ್ಗ, ಕೆಂಪು ಸೇನೆ ಹಾಗೂ ಜನತೆ ಒಂದು ಮಹಾನ್ ಪಾತ್ರ ವಹಿಸಿದ ಫ್ಯಾಸಿಸ್ಟ್-ವಿರೋಧಿ ಶಕ್ತಿಶಾಲೀ ವಿಜಯ ಜಾಗತಿಕ ಸಾಮ್ರಾಜ್ಯಶಾಹೀ ವ್ಯವಸ್ಥೆಗೆ ಇನ್ನೊಂದು ಭಾರೀ ಹೊಡೆತ ನೀಡಿತು ಹಾಗೂ ವಿಶ್ವದ ಇನ್ನೊಂದು ದೊಡ್ಡ ತುಂಡು ಬಂಡವಾಳಶಾಹೀ ವ್ಯವಸ್ಥೆಯಿಂದ ಕಿತ್ತು ದೂರ ಹೋಯಿತು. ಮಹಾನ್ ಚೀಣೀ ಕ್ರಾಂತಿಯ ವಿಜಯ, ಹಲವು ಯುರೋಪಿಯನ್ ದೇಶಗಳಲ್ಲಿ ಸಮಾಜವಾದೀ ಕ್ರಾಂತಿಗಳು, ಕ್ಯೂಬಾ ಹಾಗೂ ಕೊರಿಯ ಕ್ರಾಂತಿಗಳ ವಿಜಯ ಮತ್ತು ವಿಯೆಟ್ನಾಮೀ ಕ್ರಾಂತಿಯ ಅಭೂತಪೂರ್ವ ವಿಜಯ ಇವೆಲ್ಲಾ ಬಂಡವಾಳ ಶಾಹೀ ವ್ಯವಸ್ಥೆಯನ್ನು ಅಂತ್ಯಗೊಳಿಸಬೇಕೆಂದು ದೃಢ ನಿರ್ಧಾರ ಮಾಡಿದ ಕಾರ್ಮಿಕ ವರ್ಗದ ಬಲವರ್ಧನೆಯಾದುದರ ನೇರ ಫಲಿತಾಂಶಗಳೇ.

ಕ್ರಾಂತಿಕಾರೀ ಪರಂಪರೆಯ ಸಾಧನೆ

ಪ್ರಥಮ ಕಾರ್ಮಿಕ ವರ್ಗದ ಪ್ರಭುತ್ವವಾದ ಸೋವಿಯತ್ ಒಕ್ಕೂಟದ ನೇತೃತ್ವದಲ್ಲಿ ಫ್ಯಾಸಿಸ್ಟ್-ವಿರೋಧೀ ಮಹಾನ್ ವಿಜಯ ಸಾಮ್ರಾಜ್ಯಶಾಹೀ ವ್ಯವಸ್ಥೆಯನ್ನು ವಿಘಟನೆಗೊಳಿಸಿ ಗುಲಾಮಗಿರಿಗೊಳಗಾದ ದೇಶಗಳು ಸಾಮ್ರಾಜ್ಯಶಾಹೀ ನೊಗದಿಂದ ಸ್ವಾಧೀನತೆ ಗಳಿಸಿಕೊಳ್ಳುವುದು ಸಾಧ್ಯವಾಗಿಸಿತು; ಭಾರತದಂತಹ ದೇಶ ಸುಮಾರಾಗಿ ಸುಲಭವಾಗಿ ತನ್ನ ಸ್ವಾಧೀನತೆಗಳಿಸಿಕೊಳ್ಳಲು ಅದು ನೆರವಾಯಿತು

ಇಷ್ಟೊಂದು ಅಲ್ಪ ಸಮಯದಲ್ಲಿ ಈ ಪರಿವರ್ತನೆಯನ್ನು ಸಾಧಿಸುವುದು ಹೇಗೆ ತಾನೇ ಸಾಧ್ಯವಾಯಿತು? ಕಾರ್ಮಿಕ ವರ್ಗ ಆಂದೋಲನದ ಕ್ರಾಂತಿಕಾರೀ ವಿಭಾಗ ಮೇ ದಿನದ ಕ್ರಾಂತಿಕಾರೀ ಪರಂಪರೆಗೆ ಬದ್ಧವಾಗಿಯೇ ಮುಂದುವರಿದುದರಿಂದ ಇದು ಸಾಧ್ಯವಾಯಿತು. ಮೇ ದಿನ ಕಾರ್ಮಿಕ ವರ್ಗದ ತಕ್ಷಣದ ಹಿತಾಸಕ್ತಿಗಳ ರಕ್ಷಣೆಗೆ ಅರ್ಪಿತವಾಗಿತ್ತು ಮಾತ್ರವೇ ಅಲ್ಲ, ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯ ಐಕ್ಯತೆ ಹಾಗೂ ಬಂಡವಾಳ ಶಾಹೀ ವ್ಯವಸ್ಥೆ ಮತ್ತು ಅದರ ಶೋಷಣೆಯನ್ನು ಕೊನೆಗಾಣಿಸಲು ಕಾರ್ಮಿಕ ವರ್ಗ ರಾಜಕೀಯ ಅಧಿಕಾರ ಕಸಿದುಕೊಳ್ಳಬೇಕೆಂಬ ಘೋಷಣೆಗಳು ಮೇ ದಿನದ ಬಾವುಟದಲ್ಲಿ ಅಂಕಿತವಾಗಿದ್ದವು.

> **ಭಾರತದ ಕಾರ್ಮಿಕ ವರ್ಗ**
>
> ಎಲ್ಲಾ ಪ್ರತಿಗಾಮಿ ಶಕ್ತಿಗಳ ವಿರುದ್ಧ ಹೋರಾಡಲು, ರೈತಾಪಿ ವರ್ಗದ ಸಖ್ಯತೆಯೊಂದಿಗೆ .... ವ್ಯಾಪಕ ಪ್ರಜಾಪ್ರಭುತ್ವ ಹಾಗೂ ಸಮಾಜವಾದದತ್ತ ದಾರಿತೋರಬೇಕು. ಜನತಾ ಪ್ರಜಾಪ್ರಭುತ್ವದ ಸ್ಥಾಪನೆಯ ಘೋಷಣೆಯನ್ನೆತ್ತಬೇಕು. ಕಾರ್ಮಿಕ ವರ್ಗದ ಪ್ರಜ್ಞೆಯನ್ನು ಉನ್ನತಗೊಳಿಸಬೇಕು ಯಶಸ್ವೀ ಸಮಾಜವಾದಿ ಕ್ರಾಂತಿಗಳ ವಿರುದ್ಧ ಹಾಗೂ ಜಾಗತಿಕ ಪ್ರಾಬಲ್ಯ ಮೆರೆಸುವುದಕ್ಕಾಗಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಆಕ್ರಮಣ ಯುದ್ಧದ ವಿರುದ್ಧ ಭಾರತದ ಕಾರ್ಮಿಕ ವರ್ಗವನ್ನು ಜಾಗೃತಗೊಳಿಸಬೇಕು.
>
> ಇದು ಮೇ ದಿನದ ಶತಮಾನೋತ್ಸವದ ಕರೆ

ಈ ದಾರಿಯಿಂದ ದೂರ ಸರಿದು ಸಮಾಜವಾದ ಮತ್ತು ಕಾರ್ಮಿಕ ವರ್ಗದ ಅಧಿಕಾರದ ಮೂಲಭೂತ ಉದ್ದೇಶಗಳಿಗೆ ಹಾಗೂ ಅಂತರ್‍ರಾಷ್ಟ್ರೀಯ ಐಕ್ಯತೆಯ ಅವಶ್ಯಕತೆಗಳಿಗೆ ಕುರುಡಾಗಿ ಕಾರ್ಮಿಕ ವರ್ಗದ ತಕ್ಷಣದ ಬೇಡಿಕೆಗಳಲ್ಲಷ್ಟೇ ತಮ್ಮನ್ನು ತೊಡಗಿಸಿಕೊಂಡವರು ಕ್ರಮೇಣ ಬಂಡವಾಳ ಶಾಹಿ ಸರ್ಕಾರಗಳ ಸುಧಾರಣಾವಾದೀ ಶಾಮೀಲುಗಾರರಾಗಿಬಿಟ್ಟರು.

ಮೊದಲ ಮೇದಿನದ ಕ್ರಾಂತಿಕಾರೀ ಪರಂಪರೆಯನ್ನು ಮುಂದುವರಿಸಿಕೊಂಡು ಬಂದು ಕಾರ್ಮಿಕ ವರ್ಗದ ದೈನಂದಿನ ಹೋರಾಟಗಳನ್ನು ಸಮಾಜವಾದದ ಅದರ ಮೂಲಭೂತ ಉದ್ದೇಶದೊಂದಿಗೆ ಸಮನ್ವಯಗೊಳಿಸಿ ಕಾರ್ಮಿಕವರ್ಗದ ಅಂತರ್‍ರಾಷ್ಟ್ರೀಯತೆಯ ಬಾವುಟವನ್ನು ಕೆಳಗಿಳಿಸಲು ಎಂದೂ ಒಪ್ಪದ ವಿಭಾಗ ಯಶಸ್ವೀ ಸಮಾಜವಾದಿ ಕ್ರಾಂತಿಗಳನ್ನು ಸಂಘಟಿಸುವಲ್ಲಿ ಸಮರ್ಥವಾಯಿತು.

ಕಾರ್ಮಿಕ ವರ್ಗವನ್ನು ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಜನತೆಯ ನೇತೃತ್ವದಲ್ಲಿಡಲು ಕೂಡ ಅವರಿಗೆ ಸಾಧ್ಯವಾಯಿತು, ರಾಷ್ಟ್ರೀಯ ವಿಮೋಚನಾ ಆಂದೋಲನದಲ್ಲಿ ಕಾರ್ಮಿಕರ ಹಾಗೂ ರೈತರ ಸಖ್ಯತೆಯನ್ನು ಕಟ್ಟಿ ಬೆಳೆಸಿ ತದನಂತರ ಸಮಾಜವಾದದತ್ತ ತಿರುಗಲು ಅವರಿಗೆ ಸಾಧ್ಯವಾಯಿತು. ಹೀಗಿದ್ದವು ಸಮಾಜವಾದೀ ಕ್ರಾಂತಿಗಳ ನೇತೃತ್ವ ವಹಿಸಿದ ಮಾರ್ಕ್ಸ್‌ವಾದಿ ಲೆನಿನ್‌ವಾದಿ ಪಕ್ಷಗಳು

ಶತಮಾನೋತ್ಸವದ ಕರೆ

ಕಾರ್ಮಿಕ ವರ್ಗದ ನೂರು ವರ್ಷಗಳ ಅನುಭವ ಭಾರತದ ಕಾರ್ಮಿಕ ವರ್ಗಕ್ಕೆ ತನ್ನ ಕಾರ್ಯಾಚರಣೆ ಹಾಗೂ ಹೋರಾಟಗಳನ್ನು ಪರಾಮರ್ಶಿಸಿ ಅಂತರ್‍ರಾಷ್ಟ್ರೀಯ ಆಂದೋಲನದ ಕ್ರಾಂತಿಕಾರಿ ಪರಂಪರೆಗಳಿಗೆ ಅನುಗುಣವಾಗಿದೆಯೋ ಎಂದು ಪರೀಕ್ಷಿಸಲು ಕರೆ ನೀಡುತ್ತದೆ.

ಭಾರತದಲ್ಲಿ ಕಳೆದ ಅರ್ಧ ಶತಮಾನದಲ್ಲಿ ಹೆಚ್ಚು ಕಾಲದಿಂದ ಆಚರಿಸಲ್ಪಡುತ್ತಿದ್ದರೂ ಸುಮಾರಾಗಿ ಅದರ ಆಚರಣೆ ತಕ್ಷಣದ ಭಾಗಶಃ ಬೇಡಿಕೆಗಳಿಗೆ ಸೀಮಿತಗೊಂಡಿದೆ.

ಭಾರತದ ಕಾರ್ಮಿಕ ವರ್ಗ ಪ್ರತ್ಯೇಕತೆಯ ಈ ಪರಂಪರೆಯನ್ನು ಮುರಿದು ರಾಷ್ಟ್ರೀಯ ರಂಗದಲ್ಲಿ ದೇಶ ಎದುರಿಸುತ್ತಿರುವ ಗಂಭೀರ ಪ್ರಶ್ನೆಗಳನ್ನು ಎತ್ತಿಕೊಳ್ಳುವಲ್ಲಿ, ಎಲ್ಲಾ ಪ್ರತಿಗಾಮಿ ಶಕ್ತಿಗಳ ವಿರುದ್ಧ ಹೋರಾಡಲು ರೈತಾಪಿ ವರ್ಗದ ಸಖ್ಯತೆಯೊಂದಿಗೆ ಒಂದು ಅದಮ್ಯ ಶಕ್ತಿಯನ್ನು ಕಟ್ಟುವಲ್ಲಿ ಹಾಗೂ ವ್ಯಾಪಕ ಪ್ರಜಾಪ್ರಭುತ್ವ ಮತ್ತು ಸಮಾಜವಾದದತ್ತ ದಾರಿತೋರುವಲ್ಲಿ ಒಂದು ಪ್ರಮುಖ ಶಕ್ತಿಯಾಗಿ ಮೂಡಿಬರಬೇಕೆಂದು ಮೇದಿನದ ಶತಮಾನೋತ್ಸವ ಕರೆ ನೀಡುತ್ತದೆ.

ಜನತೆಯ ಹತೋಟಿಯಲ್ಲಿರುವ ಪ್ರಭುತ್ವ ಶಕ್ತಿ ಸುಲಭವಾಗಿ ಸಮಾಜವಾದದತ್ತ ಪರಿವರ್ತನೆಗೊಳ್ಳಲು ಸಾಧ್ಯವಾಗುವಂತೆ ಸದ್ಯದ ಬೂರ್ಜ್ವಾ ಭೂಮಾಲೀಕ ಆಳ್ವಿಕೆಯ ಸ್ಥಾನದಲ್ಲಿ ಜನತಾ ಪ್ರಜಾಪ್ರಭುತ್ವದ ಸ್ಥಾಪನೆಯ ಘೋಷಣೆಯನ್ನೆತ್ತಬೇಕೆಂದು ಅದು ಕಾರ್ಮಿಕ ವರ್ಗಕ್ಕೆ ಕರೆನೀಡುತ್ತದೆ.

ಬಡತನ, ನಿರುದ್ಯೋಗ ಹಾಗೂ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸುವುದು ಬಂಡವಾಳಶಾಹಿ ವ್ಯವಸ್ಥೆಯನ್ನು ಅಂತ್ಯಗೊಳಿಸದೆ ಸಾಧ್ಯವಿಲ್ಲ ಎಂದು ನೂರು ವರ್ಷಗಳ ಹಿಂದೆಯೇ ಮೇದಿನ ಹೋರಾಟಗಾರರಿಗೆ ಅರಿವಾಗಿತ್ತು ಎನ್ನುವುದನ್ನು ಭಾರತದ ಕಾರ್ಮಿಕ ವರ್ಗದ ಪ್ರತಿಯೊಂದು ವಿಭಾಗವೂ ಪೂರ್ಣವಾಗಿ ಅರಿತುಕೊಳ್ಳಬೇಕಾಗಿದೆ.

ಅಂತರ್‍ರಾಷ್ಟ್ರೀಯ ಆಂದೋಲನಕ್ಕೆ ಸಂಬಂಧಪಟ್ಟಂತೆ ತನ್ನ ತಕ್ಷಣದ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವಷ್ಟು ಕಾರ್ಮಿಕ ವರ್ಗದ ಪ್ರಜ್ಞೆ ಉನ್ನತಗೊಂಡಿದೆಯೋ ಎಂಬುದನ್ನು ಪರೀಕ್ಷಿಸಬೇಕೆಂದು ಭಾರತದ ಕಾರ್ಮಿಕ ವರ್ಗಕ್ಕೆ ಈ ಶತಮಾನೋತ್ಸವ ಕರೆ ನೀಡುತ್ತದೆ. ಬೂರ್ಜ್ವಾ ತತ್ವವಿಚಾರಗಳ ಹಾಗೂ ಸುಧಾರಣಾವಾದಿ ಸಂಘಗಳ ಪ್ರಭಾವಕ್ಕೊಳಗಾಗಿರುವ ಕಾರ್ಮಿಕ ವರ್ಗದ ಒಂದು ದೊಡ್ಡ ವಿಭಾಗ ಅಂತರರಾಷ್ಟ್ರೀಯ ಪ್ರಜ್ಞೆಯಿಲ್ಲದೆ, ಆಗಾಗ ವಿಶ್ವದ ಯಶಸ್ವೀ ಸಮಾಜವಾದಿ ಕ್ರಾಂತಿಗಳ ವಿರುದ್ಧ ಒಂದು ವೈಷಮ್ಯಪೂರ್ಣ ನಿಲುವು ತಾಳುತ್ತಿದೆ.

ಸಾಮ್ರಾಜ್ಯಶಾಹಿಗಳ ಯುದ್ಧೋನ್ಮಾದ ಏಕೆ ?

ಸಾಮ್ರಾಜ್ಯಶಾಹಿ ಅಮೆರಿಕಾ ಹಾಗೂ ಸಮಾಜವಾದಿ ಸೋವಿಯತ್ ಒಕ್ಕೂಟ ಎರಡನ್ನೂ ಒಂದೇ ತಕ್ಕಡಿಯಲ್ಲಿ ತೂಗುವ ಸೂಪರ್ ಶಕ್ತಿಗಳೆಂಬ ಆಳುವ ಪಕ್ಷ ಹಾಗೂ ವಿರೋಧಿ ಬೂರ್ಜ್ವಾ ಪಕ್ಷಗಳ ಮಾತನ್ನು ಈ ವಿಭಾಗ ಸುಲಭವಾಗಿ ಒಪ್ಪಿಕೊಳ್ಳುತ್ತದೆ. ಇದನ್ನು ಸರಿಪಡಿಸಬೇಕಾಗಿದೆ.

ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯ ಐಕ್ಯತೆ ಮತ್ತು ಎಲ್ಲಾ ಸೈನಿಕಶಾಹಿ, ಸಾಮ್ರಾಜ್ಯಶಾಹೀ ಮತ್ತು ಆಕ್ರಮಣ ಯುದ್ಧಗಳಿಗೆ ವಿರೋಧ ಮೇದಿನದ ಹೋರಾಟದ ಕ್ರಾಂತಿಕಾರಿ ಪರಂಪರೆಯ ಅವಿಭಾಜ್ಯ ಅಂಗ. ಇಂದು ಸಮಸ್ತ ವಿಶ್ವ ಮತ್ತೊಮ್ಮೆ ಪರಮಾಣು ಯುದ್ಧದ ಬೆದರಿಕೆಯನ್ನು ಎದುರಿಸುತ್ತಿದೆ. ಇದು ಎರಡು ಸೂಪರ್ ಶಕ್ತಿ ಬಣಗಳ ನಡುವಿನ ಯುದ್ಧವಲ್ಲ ಬದಲಾಗಿ ಸಾಮ್ರಾಜ್ಯಶಾಹಿ ಬಣ ಕಾರ್ಮಿಕ ವರ್ಗದ ನೂರು ವರ್ಷಗಳ ಹೋರಾಟದ ಫಲವಾದ ಸಮಾಜವಾದಿ ಬಣದ ವಿರುದ್ಧ ಸಂಘಟಿಸುತ್ತಿರುವ ಯುದ್ಧವಾಗಿದೆ ಇದು.

ಸಮಾಜವಾದಿ ಬಣದ ವಿರುದ್ಧ ಒಂದು ಯುದ್ಧ ಹರಿಯಬಿಡಲು ಸಾಮ್ರಾಜ್ಯಶಾಹಿಗಳು ಏಕೆ ಬಯಸುತ್ತಿದ್ದಾರೆ? ಯಾಕೆಂದರೆ ಸಮಾಜವಾದಿ ದೇಶಗಳಲ್ಲಿ ನಿರುದ್ಯೋಗವಿಲ್ಲ, ಬಡತನವಿಲ್ಲ, ಆರ್ಥಿಕ ಬಿಕ್ಕಟ್ಟಿಲ್ಲ, ಹಾಗೂ ಬಂಡವಾಳಶಾಹಿ ಶೋಷಣೆಯಿಲ್ಲ. ಸಮಾಜವಾದದ ಆಚರಣೆಯ ಸಾಧನೆಗಳು ಕೋಟಿಗಟ್ಟಲೆ ಜನರನ್ನು ತಮ್ಮತ್ತ ಚುಂಬಕದಂತೆ ಸೆಳೆಯುತ್ತಿವೆ. ಸಾಮ್ರಾಜ್ಯಶಾಹಿಗಳು ಪ್ರಗತಿಯ ಈ ಮುನ್ನಡೆಯನ್ನು ನಿಲ್ಲಿಸ ಬಯಸುತ್ತಿವೆ, ಸಮಾಜವಾದಿ ವ್ಯವಸ್ಥೆಯನ್ನು ನಾಶಗೊಳಿಸಿ ಸಮಸ್ತ ವಿಶ್ವವನ್ನು ಮತ್ತೊಮ್ಮೆ ತಮ್ಮ ಶೋಷಣೆಗೆ ಒಳಪಡಿಸ ಬಯಸುತ್ತಿವೆ

> ಕೆಲಸದ ಅವಧಿಯನ್ನು ಕಡಿಮೆ ಮಾಡುವ ಬೇಡಿಕೆಯನ್ನೂ ಕೂಡಾ ಆಳುವ ವರ್ಗ ಸಹಿಸಲಾರದಿದ್ದ ಮೊದಲ ಮೇ ದಿನದ ನಂತರ ನೂರು ವರ್ಷಗಳೊಳಗೇ ಕಾರ್ಮಿಕ ವರ್ಗ ಜನತೆಯ ಬೆಂಬಲದಿಂದ ಹಾಗೂ ಜನತೆಗಾಗಿ ಹೋರಾಡುತ್ತಾ ಶೋಷಣೆಯ ಕೋಟೆಗಳನ್ನು ಒಂದೊಂದಾಗಿ ನಾಶಗೊಳಿಸುತ್ತಾ ಬಂದು ಇಂದು ಅದರ ವಿಜಯೀ ಬಾವುಟ ಜಗತ್ತಿನ ಮೂರನೇ ಒಂದು ಭಾಗದಲ್ಲಿ ಹಾರಾಡುತ್ತಿದೆ.

ಅಮೆರಿಕಾ ಹಾಗೂ ಅದರ ಸಾಮ್ರಾಜ್ಯಶಾಹಿ ಮಿತ್ರ ದೇಶಗಳು ತಮ್ಮ ದೇಶದಲ್ಲಿ ಮೂರು ಕೋಟಿಗೂ ಮಿಕ್ಕಿ ನಿರುದ್ಯೋಗಿಗಳು, ಹಸಿವಿನಿಂದ ಕಂಗಾಲಾಗಿರುವವರಿದ್ದರೂ ಪರಮಾಣು ಹಾಗೂ ಇತರ ಶಸ್ತ್ರಾಸ್ತ್ರಗಳಿಗಾಗಿ ಕೋಟಿಗಟ್ಟಲೆ ಡಾಲರುಗಳನ್ನು ಸುರಿಯುತ್ತಿವೆ. ಸೋವಿಯತ್ ಒಕ್ಕೂಟದ ಮೇಲೆ ದಾಳಿ ನಡೆಸಲು ಅನುಕೂಲವಾಗುವಂತೆ ಯುರೋಪಿನಲ್ಲಿ ಅವರು ಕ್ಷಿಪಣಿಗಳನ್ನು ನೆಲೆಸಿದ್ದಾರೆ. ಹಾಗೂ ಇತರ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳನ್ನು ಹೆಚ್ಚಿಸುತ್ತಿದ್ದಾರೆ. ರೀಗನ್‌ರ ತಾರಾಯುದ್ಧ ಯೋಜನೆ ಪರಮಾಣು ಯುದ್ಧವನ್ನು ಬಾಹ್ಯಾಕಾಶಕ್ಕೊಯ್ಯುವ ಒಂದು ದುಷ್ಟ ತಂತ್ರ.

ಪರಮಾಣು ಯುದ್ಧ ಯೋಜನೆ ಭಾರತದಂತಹ ದೇಶಗಳನ್ನು ಮತ್ತೊಮ್ಮೆ ಗುಲಾಮಗಿರಿಗೊಳಪಡಿಸುವ ಜಗತ್ತಿನಲ್ಲಿ ತನ್ನ ಪ್ರಾಬಲ್ಯ ಮೆರೆಸುವ ಒಂದು ಯೋಜನೆ ಕೂಡಾ.

ಆದ್ದರಿಂದಲೇ ಅಮೆರಿಕಾ ಸಾಮ್ರಾಜ್ಯಶಾಹಿಗಳು ಹಾಗೂ ರೀಗನ್ ಪರಮಾಣು ಶಸ್ತ್ರಾಸ್ತ್ರಗಳ ಮೇಲೆ ಯಾವುದೇ ಮಿತಿಗೆ ಒಪ್ಪಲು, ಬಾಹ್ಯಾಕಾಶವನ್ನು ಪರಮಾಣು ಶಸ್ತ್ರಾಸ್ತ್ರಗಳಿಂದ ಮುಕ್ತವಾಗಿಡಲು ನಿರಾಕರಿಸುತ್ತಿದ್ದಾರೆ. ಸೋವಿಯತ್ ಒಕ್ಕೂಟ ಪರಮಾಣು ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸುವುದನ್ನು ನಿಲ್ಲಿಸಲು ಹಾಗೂ ಯುದ್ಧದ ತಯಾರಿ ವೇಗವನ್ನು ಹಿಡಿದ[illegible] ಪ್ರಸ್ತಾಪಗಳನ್ನು ಮಂಡಿಸಿದೆ. ತಾನು ಮೊದಲು ಪರಮಾಣು ಶಸ್ತ್ರಗಳನ್ನು ಬಳಸುವುದಿಲ್ಲ ಎಂದು ಅದು ಏಕಪಕ್ಷೀಯವಾಗಿ ಘೋಷಿಸಿದೆ. ಆದರೆ ಅಮೆರಿಕಾ ಸರಕಾರ ಇದಕ್ಕೆ ಪ್ರತಿಕ್ರಿಯಿಸಲು, ತಾನು ಮೊದಲು ಪರಮಾಣು ಶಸ್ತ್ರ ಬಳಸುವುದಿಲ್ಲ ಎಂದು ಪ್ರತಿಜ್ಞೆ ಮಾಡಲು ಅದು ನಿರಾಕರಿಸಿತು. ವಾಸ್ತವ ಸಂಗತಿಯೇನೆಂದರೆ ತಾರಾಯುದ್ಧ ಯೋಜನೆಯ ಉದ್ದೇಶ ಮೊದಲ ಪರಮಾಣು ಆಘಾತ ನೀಡುವುದೇ ಆಗಿದೆ.

ನಾವು ಅಸಮರ್ಥರಾದರೆ

ಈ ಸನ್ನಿವೇಶದಲ್ಲಿ, ಈ ಶತಮಾನದ ಅಂತ್ಯದೊಳಗೆ ಪರಮಾಣು ಶಸ್ತ್ರಾಸ್ತ್ರಗಳನ್ನು ನಿರ್ಮೂಲಗೊಳಿಸಲು ಹಾಗೂ ಈ ಉದ್ದೇಶ ಸಾಧನೆಗೆ ತೆಗೆದುಕೊಳ್ಳಬೇಕಾದ ಆರಂಭದ ಕ್ರಮಗಳ ಬಗ್ಗೆ ಇತ್ತೀಚೆಗೆ ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಗೋರ್ಬಚೊವ್ ರವರು ಮಂಡಿಸಿರುವ ಪ್ರಸ್ತಾಪಗಳು ಶಾಂತಿಗೆ ಪೂರಕವಾಗಿವೆ ಹಾಗೂ ಮಾನವ ಕುಲವನ್ನು ಒಂದು ಅತ್ಯಂತ ವಿನಾಶಕಾರೀ ಯುದ್ಧದಿಂದ ರಕ್ಷಿಸುವ ದಾರಿ ತೋರಿಸಿಕೊಟ್ಟಿದೆ. ಭಾರತದ ಕಾರ್ಮಿಕ ಸಂಘಟನಾ ಆಂದೋಲನ ಹಾಗೂ ಸಮಸ್ತ ಕಾರ್ಮಿಕ ವರ್ಗ ಈ ಪ್ರಸ್ತಾಪಗಳಿಗೆ ತನ್ನ ಪೂರ್ಣ ಬೆಂಬಲ ನೀಡಬೇಕು.

ಭಾರತದ ಕಾರ್ಮಿಕವರ್ಗ ಯಶಸ್ವೀ ಸಮಾಜವಾದೀ ಕ್ರಾಂತಿಗಳ ವಿರುದ್ಧ ಒಂದು ಆಕ್ರಾಮಕ ಯುದ್ಧದ, ಜಾಗತಿಕ ಪ್ರಾಬಲ್ಯದ ಒಂದು ಆಕ್ರಾಮಕ ಯುದ್ಧದ ಅಪಾಯದ ವಿರುದ್ಧ ಹೋರಾಡಲು ಅಸಮರ್ಥವಾದರೆ ಜಗತ್ತಿನ ಕಾರ್ಮಿಕರೇ ಒಂದಾಗಿ ಎಂಬ ಕೂಗು ಅರ್ಥಹೀನವಾಗುತ್ತದೆ. ಯುದ್ಧದ ಅಪಾಯದ ವಿರುದ್ಧ ತಮ್ಮ ಶಕ್ತಿಯೆಲ್ಲಾ ವಿನಿಯೋಗಿಸಿ ಪ್ರಚಾರ ನಡೆಸಬೇಕೆಂದು ಹಾಗೂ ಶಾಂತಿಗಾಗಿ ಹೋರಾಟದಲ್ಲಿ ಭಾರತದ ಕಾರ್ಮಿಕ ವರ್ಗವನ್ನು ವಿಶ್ವದ ಕಾರ್ಮಿಕ ವರ್ಗದೊಂದಿಗೆ ಸೇರಿಕೊಳ್ಳುವಂತೆ ಜಾಗೃತಗೊಳಿಸಬೇಕೆಂದು ಮೇ ದಿನದ ಶತಮಾನೋತ್ಸವ ನಮ್ಮೆಲ್ಲಾ ಸಂಘಗಳು ಹಾಗೂ ಅವುಗಳ ಸದಸ್ಯರಿಗೆ ಕರೆ ನೀಡುತ್ತದೆ.

ಮೇ ದಿನದ ಶತಮಾನೋತ್ಸವದಂದು ಕಾರ್ಮಿಕ ವರ್ಗ ಹಾಗೂ ಕಾರ್ಮಿಕ ಸಂಘಗಳು ತಮ್ಮ ಚಟುವಟಿಕೆಗಳನ್ನು ಭಾಗಶಃ ಬೇಡಿಕೆಗಳಿಗಷ್ಟೆ ಸೀಮಿತಗೊಳಿಸುವ ಸಂಪ್ರದಾಯವನ್ನು ಮೀರುವ ತಮ್ಮ ನಿರ್ಧಾರವನ್ನು ತಿಳಿಯಪಡಿಸಬೇಕು ಹಾಗೂ ನಮ್ಮ ದೇಶದ ಮತ್ತು ನಮ್ಮ ಜನತೆಯ ಸಮಸ್ಯೆಗಳನ್ನು ಎದುರಿಸುವಲ್ಲಿ ತಮ್ಮ ಪಾತ್ರವನ್ನು ವ್ಯಕ್ತಪಡಿಸಬೇಕು.

ತಕ್ಷಣದ ಪಕ್ಷಗಳಿಗೆ ಮಾತ್ರ ತಮ್ಮ ಗಮನ ಕೇಂದ್ರೀಕರಿಸಿ ಕಾರ್ಮಿಕ ವರ್ಗದ ಆಂದೋಲನ ತನ್ನನ್ನು ಅಸಂಖ್ಯಾತ ಜನಸಮೂಹಗಳಿಂದ, ವಿಶೇಷವಾಗಿ ರೈತಾಪಿ ವರ್ಗ ಹಾಗೂ ಕೃಷಿ ಕಾರ್ಮಿಕರಿಂದ ದೂರವಾಗಿರುವ ಒಂದು ಸಂಕುಚಿತ ಶಕ್ತಿಯನ್ನಾಗಿ ಪರಿವರ್ತಿಸಿಕೊಂಡು ಬಿಟ್ಟಿದೆ.

ಇಂದು ಭಾರತೀಯ ಜನತೆಯ ಪ್ರತಿಯೊಂದು ವಿಭಾಗವೂ ಕೇಂದ್ರ ಸರಕಾರದ ಆಕ್ರಮಣಕ್ಕೊಳಗಾಗಿದೆ. ಜಾಗತಿಕ ಬ್ಯಾಂಕ್ ಹಾಗೂ ಐ ಎಂ ಎಫ್.ಗಳ ಒತ್ತಾಯಗಳಿಗೆ ಮನ್ನಣೆ ನೀಡಿರುವ ರಾಜೀವ್ ಸರಕಾರದ ಆರ್ಥಿಕ ಧೋರಣೆ ನಮ್ಮ ಆರ್ಥಿಕ ಸ್ವಾಧೀನತೆಗೆ ಒಂದು ಅಪಾಯವಾಗಿದೆ.

ಅಲಿಪ್ತ ವಿದೇಶಾಂಗ ನೀತಿಯೂ ಅಮೆರಿಕಾ ಹಾಗೂ ಇತರ ಮೂಲಗಳಿಂದ ಹಲ್ಲೆಗೊಳಗಾಗಿದೆ. ಧೃಢತ್ವಹೀನತೆ ಹಾಗೂ ಚಂಚಲತೆ ಈಗಾಗಲೇ ಕಂಡು ಬರುತ್ತಿದೆ. ಇದು ಅಪಾಯಕಾರೀ ರಾಷ್ಟ್ರ ವಿರೋಧಿ ರಾಜಿಗಳಿಗೆ ದಾರಿ ಮಾಡಿಕೊಡಬಹುದು.

ಅದೇ ಕಾಲದಲ್ಲಿ ಕಾರ್ಮಿಕ ವರ್ಗದ ಮೇಲೆ ನೇರ ಆಕ್ರಮಣ ನಡೆಸಲಾಗುತ್ತಿದೆ. ನೂರಾರು ದೊಡ್ಡ ಕಾರ್ಖಾನೆಗಳನ್ನು ಮುಚ್ಚಲಾಗುತ್ತಿದೆ. ಸಾವಿರಾರು ಸಣ್ಣ ಕಾರ್ಖಾನೆಗಳನ್ನೂ ರೋಗಗ್ರಸ್ತಗೊಳಿಸಲಾಗುತ್ತಿದೆ ಅವುಗಳಲ್ಲಿ ಹೆಚ್ಚಿನವು ಕಾರ್ಯ ನಿರ್ವಹಿಸಲು ಅಸಮರ್ಥವೆಂದು, ಅಂದರೆ ಅವನ್ನೂ ಪುನಃ ತೆರೆಯುವುದು ಸಾಧ್ಯವಿಲ್ಲವೆಂದು ಘೋಷಿಸಲಾಗುತ್ತಿದೆ.

ನಗರಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಮೂರು ಕೋಟಿಗೇರಿದೆ. ಸರಕಾರ ತನ್ನ ಪೋಷಿತ ಕಂಪ್ಯೂಟರೀಕರಣ ಹಾಗೂ ಸ್ವಯಂ ಚಾಲಕೀಕರಣದ ಧೋರಣೆಯ ಮೂಲಕ ಉದ್ಯೋಗವಿಲ್ಲದವರ ಸಂಖ್ಯೆಗೆ ಮತ್ತೆ ಕೆಲವು ಮಿಲಿಯಗಳನ್ನು ಸೇರಿಸಬಯಸುತ್ತಿದೆ.

ತಮ್ಮ ಧೋರಣೆಯನ್ನು ಕಾರ್ಯರೂಪಕ್ಕೆ ತರಲು ರಾಜೀವ ಸರಕಾರ ಹಲವಾರು ಕಾರ್ಮಿಕ-ವಿರೋಧಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಮತ್ತು ಕಾರ್ಮಿಕವರ್ಗದ ಆಂದೋಲನದ ಹಕ್ಕು ಹಾಗೂ ಸ್ವಾತಂತ್ರ್ಯಗಳನ್ನು ಮಿತಗೊಳಿಸಲು ಪ್ರಯತ್ನಿಸುತ್ತಿದೆ. ಸಂವಿಧಾನದ ಪರಿಚ್ಛೇದ 311(2) ಕ್ಕೆ ಸಂಬಂಧಪಟ್ಟಂತೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಸರಕಾರ ತನ್ನ ನೌಕರರನ್ನು ಮನಬಂದಂತೆ ವಜಾ ಮಾಡಲು ತನಗೆ ಅಧಿಕಾರವಿದೆಯೆಂದು ಹೇಳುವಲ್ಲಿ ಅದರ ಕೈಗಳನ್ನು ಬಲಪಡಿಸಿದೆ. ಸಾಮೂಹಿಕ ಚೌಕಾಸಿಯ ಮೇಲೆ ಆಕ್ರಮಣ ನಡೆಸಲು, ಮುಷ್ಕರಗಳನ್ನು ಕಾನೂನು ಬಾಹಿರಗೊಳಿಸಲು ಸರಕಾರ ಕ್ರಮ ಕೈಗೊಳ್ಳುತ್ತಿದೆ.

ಮೇ ದಿನದಂದು ಕಾರ್ಮಿಕ ವರ್ಗ ಸರಕಾರದ ಆರ್ಥಿಕ ಧೋರಣೆಯ ವಿರುದ್ಧ ಹಾಗೂ ನಮ್ಮ ಆರ್ಥಿಕತೆಯೊಳಗೆ ಆಳವಾಗಿ ನುಗ್ಗಲು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಸ್ವಾತಂತ್ರ್ಯ ನೀಡಿರುವುದರ ವಿರುದ್ಧ ತನ್ನ ಪ್ರತಿಭಟನೆಯ ದನಿಯನ್ನು ಒಗ್ಗಟ್ಟಿನಿಂದ ಎತ್ತಬೇಕು.

ಕಾರ್ಮಿಕ ವರ್ಗ ಒತ್ತಾಯಿಸಬೇಕಾಗಿದೆ

ಅದು ಕಾರ್ಮಿಕ ಸಂಘಟನೆಯ ಹಕ್ಕುಗಳ ವಿರುದ್ಧ ಆಕ್ರಮಣಗಳನ್ನು ನಿಲ್ಲಿಸಬೇಕೆಂದು ಒತ್ತಾಯಿಸಬೇಕು ಹಾಗೂ ಕಂಪ್ಯೂಟರೀಕರಣದ ಅಧಿಕೃತ ಧೋರಣೆಯನ್ನು ಖಂಡಿಸಬೇಕು. ಮುಚ್ಚಿರುವ ಎಲ್ಲಾ ಕಾರ್ಖಾನೆಗಳನ್ನು, ಕಂಪೆನಿಗಳನ್ನು ತೆರೆಯಬೇಕೆಂದು ಕರೆ ನೀಡುತ್ತಾ ಕಾರ್ಮಿಕ ವರ್ಗ ತಕ್ಷಣ ನಿರುದ್ಯೋಗ ಪರಿಹಾರ ಹಾಗೂ ಸಂವಿಧಾನದಲ್ಲಿ ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಸೇರಿಸಬೇಕೆಂದು ಒತ್ತಾಯಿಸಬೇಕು. ಹತ್ತಿ ಬಟ್ಟೆ, ಸೆಣಬು ಹಾಗೂ ಸಕ್ಕರೆ ಕೈಗಾರಿಕೆಗಳನ್ನು ತಕ್ಷಣ ಹಾಗೂ ಪೂರ್ಣವಾಗಿ ರಾಷ್ಟ್ರೀಕರಿಸಬೇಕೆಂದು ಅದು ಒತ್ತಾಯಿಸಬೇಕು

ಮೇ ದಿನದಂದು ಕಾರ್ಮಿಕ ವರ್ಗ

* ಸರ್ಕಾರದ ಆರ್ಥಿಕ ಧೋರಣೆಯ ವಿರುದ್ಧ ಒಗ್ಗಟ್ಟಿನಿಂದ ದನಿ ಎತ್ತಬೇಕು,
* ಕೆಲಸದ ಹಕ್ಕನ್ನು ಸಂವಿಧಾನದಲ್ಲಿ ಮೂಲಹಕ್ಕಾಗಿ ಸೇರಿಸಲು ಒತ್ತಾಯಿಸಬೇಕು
* ರೈತಾಪಿ ವರ್ಗವನ್ನು ನಿರ್ಲಕ್ಷಿಸುವ ತನ್ನ ಸಂಪ್ರದಾಯನ್ನು ಮುರಿದು ಗ್ರಾಮಾಂತರ ಜನಸಮೂಹಗಳ ರಕ್ಷಣೆಗೆ ಮುಂದಾಗಬೇಕು,
* ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡಿ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ತನ್ನ ದೃಢನಿರ್ಧಾರವನ್ನು ಘೋಷಿಸಬೇಕು.
* ದೇಶದ ಶ್ರಮ ಜೀವಿಗಳ ಐಕ್ಯತೆಯನ್ನು ಛಿದ್ರಗೊಳಿಸುವ ಶಕ್ತಿಗಳ ವಿರುದ್ಧ ಹೋರಾಡಬೇಕು,

ಮೇ ದಿನದಂದು ಇದು ಸಿ ಐ ಟಿ ಯು ಕರೆ.

ಭಾರತೀಯ ಜನತೆಯ ಎಲ್ಲಾ ವಿಭಾಗಗಳೂ ಬೆಲೆ ಏರಿಕೆ ಹಾಗೂ ವಿಪರೀತ ಕರಭಾರದ ಹೊರೆಯಿಂದ ಜರ್ಜರಿತಗೊಂಡಿವೆ. ಕೃಷಿ ಕಾರ್ಮಿಕನನ್ನು ಉದ್ಯೋಗದಿಂದ ವಂಚಿಸಿ, ಆತನಿಗೆ ಕೇವಲ ದಾಸನಂತೆ ಕೂಲಿ ನೀಡಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ನಾಲ್ಕು ಕೋಟಿ ಮೀರಿದೆ. ರೈತರ ಉತ್ಪಾದನೆಗಳಿಗೆ ತಕ್ಕ ಪ್ರತಿಫಲ ಸಿಗದಂತೆ ವಂಚಿಸಲಾಗುತ್ತಿದೆ. ಭೂ ಮಾಲಕರು ಹರಿಜನರ ಹಾಗೂ ಆದಿವಾಸಿಗಳಿಗೆ ಚಿತ್ರಹಿಂಸೆ ಕೊಡುತ್ತಲೇ ಇದ್ದಾರೆ, ನಿರ್ಭಯವಾಗಿ ಅವರ ಕೊಲೆ ಮಾಡುತ್ತಿದ್ದಾರೆ.

ಮೇ ದಿನದ ಈ ಶತಮಾನೋತ್ಸವದಂದು ಕಾರ್ಮಿಕವರ್ಗದ ಆಂದೋಲನ ರೈತಾಪಿ ವರ್ಗವನ್ನು ನಿರ್ಲಕ್ಷಿಸುವ ಸಾಂಪ್ರದಾಯಿಕ ದೃಷ್ಟಿಕೋಣವನ್ನು ಮುರಿದು, ಗ್ರಾಮಾಂತರ ಜನಸಮೂಹಗಳ ರಕ್ಷಣೆಗೆ ಮುಂದೆ ಬರಬೇಕು

ವಿಪರೀತ ತೆರಿಗೆ ಹಾಗೂ ಬೆಲೆ ಏರಿಕೆಯ ವಿರುದ್ಧ, ಶೋಷಣೆಯ ವಿರುದ್ಧ ಜನತೆಯ, ರೈತಾಪಿಗಳ ಪರವಾಗಿ ಹೋರಾಡಲು ತಾನು ಸಿದ್ಧ ಎಂಬುದನ್ನು, ತನ್ನ ದೃಢ ನಿರ್ಧಾರವನ್ನು ಜಾಹೀರುಗೊಳಿಸಬೇಕಾಗಿದೆ. ಕೃಷಿ ಸಂಬಂಧಗಳನ್ನು ಪೂರ್ಣವಾಗಿ ಬದಲಿಸಬೇಕೆಂದು ಜಮೀನಿನ ಸಾಂದ್ರೀಕರಣವನ್ನು ಮುರಿದು ಉಳುವವರಿಗೆ ಜಮೀನು ಹಂಚಬೇಕೆಂದು ಕಾರ್ಮಿಕ ವರ್ಗ ಒತ್ತಾಯಿಸಬೇಕು. ರೈತಾಪಿ ವರ್ಗದ ಒಂದು ದೃಢ ಬೆಂಬಲವಿಲ್ಲದೆ, ಅವರೊಡನೆ ಒಂದು ದೃಢ ಸಖ್ಯತೆಯಿಲ್ಲದೆ ಮುಂದುವರಿದ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ತನ್ನ ಪ್ರಯತ್ನಗಳಿಗೆ ಫಲ ದೊರೆಯುವ ಸಮಾಜವಾದದ ಸಾಧನೆ ಸಾಕಾರಗೊಳ್ಳಲು ಸಾಧ್ಯವಿಲ್ಲವೆಂಬುದನ್ನು ಕಾರ್ಮಿಕ ವರ್ಗ ಅರಿತುಕೊಳ್ಳಬೇಕಾಗಿದೆ.

ದೃಢ ಹೋರಾಟವನ್ನು ಘೋಷಿಸಬೇಕು

ಮೇದಿನದಂದು ಕಾರ್ಮಿಕವರ್ಗ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡುವ ಹಾಗೂ ಜನತೆಯ ಪ್ರಜಾಪ್ರಭುತ್ವದ ಹಕ್ಕುಗಳನ್ನು ರಕ್ಷಿಸಿ ವಿಸ್ತರಿಸುವ ತನ್ನ ದೃಢನಿರ್ಧಾರವನ್ನು ಘೋಷಿಸಬೇಕು.

ನಮ್ಮ ದೇಶದ ಐಕ್ಯತೆಯನ್ನು ಬುಡಮೇಲು ಮಾಡುತ್ತಿರುವ ಸಾಮ್ರಾಜ್ಯಶಾಹಿ ಪಿತೂರಿಗಳ ವಿರುದ್ಧ, ಶ್ರಮಜೀವಿಗಳ ಐಕ್ಯತೆಯನ್ನು ಅಸ್ತವ್ಯಸ್ತಗೊಳಿಸಿ ವಿಘಟನೆಯ ಕೋಮುವಾದಿ ಹಾಗೂ ಕಡು ಸಂಪ್ರದಾಯ ಶರಣ ಶಕ್ತಿಗಳನ್ನು ಹರಿಯ ಬಿಡುತ್ತಿರುವ ಪ್ರತ್ಯೇಕತಾವಾದಿ ಹಾಗೂ ವಿಭಜಕ ಶಕ್ತಿಗಳ ವಿರುದ್ಧ ಹೋರಾಡುವ ನಿರ್ಧಾರವನ್ನು ಕಾರ್ಮಿಕ ವರ್ಗ ಘೋಷಿಸಬೇಕು.

ಸರ್ವಾಧಿಕಾರ ಹಾಗೂ ಅನೈಕ್ಯತೆ ಮತ್ತು ವಿಭಾಜಕ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ನಿರತವಾಗಿರುವ ದೇಶದ ಎಡಶಕ್ತಿಗಳಿಗೆ ಪೂರ್ಣಬೆಂಬಲ ನೀಡಲು ಕಾರ್ಮಿಕವರ್ಗ ನಿರ್ಧರಿಸಬೇಕು.

[7ನೇ ಪುಟ ನೋಡಿ]

ಕೈಗಾರಿಕೆಗಳ ಮುಚ್ಚುವಿಕೆ

ಉತ್ಪಾದನೆ ಹೆಚ್ಚಾಗುತ್ತಿದೆಂದು ಸರ್ಕಾರಿ ವಕ್ತಾರರು ಹೇಳುತ್ತಿರುವಾಗಲೇ 500 ದೊಡ್ಡ ಕೈಗಾರಿಕೆಗಳೂ, 90 ಸಾವಿರ ಸಣ್ಣ ಘಟಕಗಳೂ ಮುಚ್ಚಲ್ಪಟ್ಟಿವೆ. ಲಕ್ಷಾವಧಿ ಕಾರ್ಮಿಕರನ್ನು ಬೀದಿಪಾಲು ಮಾಡಿವೆ. ಇಂತ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದ ಆಮದು ಧೋರಣೆಯಿಂದಾಗಿ ಮತ್ತಷ್ಟು ಕೈಗಾರಿಕೆಗಳು ಮುಚ್ಚಲ್ಪಡುವ ಸಂಭವವಿದೆ. ದೊಡ್ಡ ಗುತ್ತೇದಾರಿ ಕೈಗಾರಿಕೆಗಳಿಗಷ್ಟೇ ಅದರಿಂದ ಲಾಭವಾಗುತ್ತದೆ ಆಧುನಿಕ ಯಂತ್ರಗಳನ್ನೂ ಕಂಪ್ಯೂಟರ್‌ಗಳನ್ನೂ ಅವರು ಉಪಯೋಗಿಸುತ್ತಿರುವುದರಿಂದ ಉದ್ಯೋಗದ ಅವಕಾಶ ಕಡಿಮೆ. 1985 ಡಿಸೆಂಬರ್ ಕೊನೆಯೊಳಗಾಗಿ ಲೈಸೆನ್ಸ್ ರದ್ದಾದ 25 ದೊಡ್ಡ ಕೈಗಾರಿಕಾ ಗುಂಪುಗಳು ರೂ 4000 ಕೋಟಿಯ 1195 ಹೊಸ ರಿಜಿಸ್ಟ್ರೇಶನ್ ಮಾಡಿವೆ, ಗುತ್ತೇದಾರಿಗಳಲ್ಲೆಂದು ವಿಸಾಯತಿ ಪಡೆದ ಕಂಪೆನಿಗಳು ಮುಖ್ಯವಾಗಿ ಇಲೆಕ್ಟ್ರಾನಿಕ್ಸ್‌ನಲ್ಲಿ ರೂ. 2889 ಕೋಟಿ ಬಂಡವಾಳ ಹೂಡಿವೆ ಎಂದು ಆರ್ ಪಿ ಗೋಯೆಂಕ ಹೇಳಿದ್ದಾರೆ.

ಆದ್ದರಿಂದ ಈ ಗಂಡಾಂತರವನ್ನೆದುರಿಸಲು ಬರೀ ಪ್ರತಿಭಟನೆ, ಧರಣಿಗಳು, ಮಾತ್ರವಲ್ಲ ಅದಕ್ಕಿಂತಲೂ ತೀವ್ರತರವಾದ ಕ್ರಮ ಅಗತ್ಯ.

ನಿರುದ್ಯೋಗಿಗಳ ಸಮಸ್ಯೆ

ನಾರು ಮತ್ತು ಬಟ್ಟೆ ಗಿರಣಿಗಳ ಮುಚ್ಚುವಿಕೆಯಿಂದಾಗಿ ಪರಿಸ್ಥಿತಿ ಮತ್ತಷ್ಟು ಕೆಡುತ್ತಿರುವಾಗ, ನಿರುದ್ಯೋಗಿಗಳ ಸಂಖ್ಯೆ 3 ಕೋಟಿಗೂ ಮೀರಿದೆ. ಸಂಘಟಿತ ಕಾರ್ಮಿಕ ವರ್ಗ ತನ್ನ ವೇತನ ಮತ್ತಿತರ ಸೌಲಭ್ಯಗಳನ್ನು ರಕ್ಷಿಸಿಕೊಳ್ಳುವುದರಲ್ಲೇ ಮಗ್ನವಾಗಿದೆಯಲ್ಲದೆ ನಿರುದ್ಯೋಗಿ ಯುವ ಜನಾಂಗವನ್ನು ಸಂಪೂರ್ಣ ಕಡೆಗಣಿಸಿದೆ. ಹೀಗಾಗಿ ಬಿಕ್ಕಟ್ಟಿಗೆ ಕಾರಣ ಭೂತರಾದ ಬಂಡವಾಳಶಾಹಿ ಪಥದಲ್ಲಿ ತಾವೂ ಭಾಗಿದಾರರಾಗುತ್ತಿದ್ದಾರೆ. ಸಂಘಟಿತ ಕಾರ್ಮಿಕ ವರ್ಗ ನಿರುದ್ಯೋಗಿಗಳನ್ನ ಸಂಘಟಿಸಿ ಅವರಿಗೆ ಪರಿಹಾರ ಕೊಡಿಸಲು ಹೋರಾಡಿ ಕಾರ್ಮಿಕ ವರ್ಗದ ಬಲ ಹೆಚ್ಚಿಸಬೇಕು

ಪಶ್ಚಿಮ ಬಂಗಾಲದ ಎಡರಂಗ ಸರಕಾರ ನಿರುದ್ಯೋಗ ಭತ್ತೆ ಕೊಡುತ್ತಿದೆ. ಆದರೆ ಇತರ ಕಾಂಗ್ರೆಸ್ ಸರ್ಕಾರಗಳು ಏನೂ ಮಾಡಿಲ್ಲ ಬದಲಾಗಿ ಮಣ್ಣಿನ ಮಕ್ಕಳ ಘೋಷಣೆ ಮೂಲಕ ಅವರಲ್ಲಿ ಒಡಕು ಮತ್ತು ಜಗಳ ಎಬ್ಬಿಸುತ್ತಿದ್ದಾರೆ.

ಈ ವರ್ಷ ಮೇ ಶತಾಬ್ದಿ ಆಚರಿಸುತ್ತಿರುವಾಗ ನಿರುದ್ಯೋಗಿಗಳ ಬೇಡಿಕೆಗಳಿಗಾಗಿ, ಕೆಲಸದ ಹಕ್ಕು ಮೂಲಭೂತ ಹಕ್ಕೆಂದು ಸಂವಿಧಾನದಲ್ಲಿ ಸೇರಿಸುವಂತೆ ಒತ್ತಾಯಿಸಲು ಒಂದು ದಿನವನ್ನು ಮೀಸಲಿಡಬೇಕು ಸಮಾಜವಾದಿ ದೇಶಗಳ ಸಂವಿಧಾನದಲ್ಲಿ ಕೆಲಸದ ಹಕ್ಕನ್ನು ಸೇರಿಸಲಾಗಿದೆಂಬುದನ್ನು ಕೆಲಸಗಾರರಿಗೆ ತಿಳಿಯ ಹೇಳಬೇಕು.

ಕೇಂದ್ರ ಮತ್ತು ರಾಜ್ಯ ಸರ್ಕಾರಿ ಖಾತೆಗಳಲ್ಲಿ ಸಾವಿರಾರು ಸ್ಥಾನಗಳು ಖಾಲಿ ಬಿದ್ದಿವೆ. ಅವುಗಳನ್ನು ತುಂಬಿಸಿಕೊಳ್ಳುವಂತೆ ತೀವ್ರ ಚಳುವಳಿ ನಡೆಸಬೇಕು.

ದುಡಿಯುವ ಮಹಿಳೆಯರ ರಕ್ಷಣೆಗಾಗಿ ಹೆಚ್ಚಿನ ಗಮನ ಹರಿಸಲಾಗುತ್ತಿಲ್ಲ ಅವರ ನೌಕರಿಯ ರಕ್ಷಣೆ ಮಾಡುವುದು ಅಗತ್ಯ.

40 ಲಕ್ಷ ರಾಜ್ಯ ಸರ್ಕಾರಿ ನೌಕರದಾರರು ಸಂವಿಧಾನದ 310, 311, ವಿಧಿಗಳವಿರುದ್ಧ ದೇಶಾದ್ಯಂತ ಮುಷ್ಕರ ಹೂಡಿರುವುದು ಸ್ವಾಗತಾರ್ಹ.

ಅಸಂಘಟಿತ ಕಾರ್ಮಿಕರು

ಅಸಂಘಟಿತ ಕಾರ್ಮಿಕರು ಬಹಳ ಸುಲಿಗೆಗೆ ತುತ್ತಾಗಿದ್ದು ಅವರನ್ನು ಸಂಘಟಿಸುವುದು ಅತ್ಯಗತ್ಯ. ಅವರಿಲ್ಲದೆ ಕಾರ್ಮಿಕ ವರ್ಗದ ಚಳುವಳಿ ಪೂರ್ಣಗೊಳ್ಳಲು ಸಾಧ್ಯವಿಲ್ಲ.

ಕಾಂಟ್ರಾಕ್ಟ್ ಕಾರ್ಮಿಕರ ಕಾನೂನಿಗೆ ಇತ್ತೀಚೆಗೆ ಲೋಕಸಭೆಯಲ್ಲಿ ಒಂದು ತಿದ್ದುಪಡಿ ತರಲಾಗಿದೆ. ಕಂಟ್ರಾಕ್ಟ್ ಕೆಲಸಗಾರರ ತಂಟೆ ನಿವಾರಣೆ ರಾಜ್ಯ ಸರಕಾರಗಳ ಜವಾಬ್ದಾರಿಯಾಗಿತ್ತು. ಪಶ್ಚಿಮ ಬಂಗಾಲದ ಎಡರಂಗ ಸರಕಾರ ಕಳೆದೆರಡು ವರ್ಷಗಳಲ್ಲಿ ಆ ರಾಜ್ಯದಲ್ಲಿರುವ ಕಂಟ್ರಾಕ್ಟ್ ಕೆಲಸಗಾರರ ತಂಟೆಗಳನ್ನೆಲ್ಲ ಕೆಲಸಗಾರರಿಗೆ ಸಮಾಧಾನವಾಗುವ ರೀತಿಯಲ್ಲಿ ಬಗೆಹರಿಸಿದ ಕಾರಣದಿಂದಾಗಿಯೇ ರಾಜ್ಯ ಸರಕಾರಗಳಿಗಿರುವ ಅಧಿಕಾರವನ್ನು ಕೇಂದ್ರ ಸರಕಾರ ವಹಿಸಿಕೊಳ್ಳುವ ಒಳಸಂಚು ನಡೆದಿದೆ. ಆದರಿಂದ ಕಂಟ್ರಾಕ್ಟ್ ಕೆಲಸಗಾರರಿಗೆ ಅನ್ಯಾಯವಾಗುತ್ತದೆ. ಕಾಂಗ್ರೆಸ್ ಸರಕಾರ ಆ ರೀತಿ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುತ್ತಿದೆ.

ತಮ್ಮ ಹಕ್ಕು ರಕ್ಷಣೆಗಾಗಿ ಕಾರ್ಮಿಕರ ನಿರಂತರ ಹೋರಾಟ ಮುಂದುವರಿದಿದೆ. ಪ್ರತಿವರ್ಷ 10 ಲಕ್ಷಕ್ಕಿಂತಲೂ ಹೆಚ್ಚು ಜನ ಮಾಲಕರ ದಬ್ಬಾಳಿಕೆಯ ವಿರುದ್ಧ ಹೋರಾಡುವಾಗ ತಮ್ಮ ನೌಕರಿ, ಜೀವನ, ವೇತನಗಳನ್ನು ಕಳೆದು ಕೊಳ್ಳಬೇಕಾಗುತ್ತದೆ 1985 ರಲ್ಲಿ 206 ಸಾವಿರ ಕೆಲಸಗಾರರು ಮುಷ್ಕರ ಹೂಡಿದ್ದು 1700 ಸಾವಿರ ದುಡಿತದ ದಿನ ಕಳೆದುಕೊಳ್ಳಬೇಕಾಯಿತು ಪೋಲೀಸರ, ಮಾಲಕರ ಗೂಂಡಾಗಳ ದಬ್ಬಾಳಿಕೆ ಎದುರಿಸಬೇಕಾಯಿತು ಅಪಾರ ಸಂಕಷ್ಟ ಸಹಿಸಬೇಕಾಯಿತು.

ಈ ರೀತಿಯ ಕಾರ್ಮಿಕರ ನಿರಂತರ ಚಳುವಳಿಯನ್ನು ರೈತರ – ಕೃಷಿ ಕಾರ್ಮಿಕರ ಹಾಗೆಯೇ ಸರ್ವಾಧಿಕಾರದ ವಿರುದ್ಧ ಹೋರಾಟಗಳನ್ನೂ ಜೋಡಿಸಿಕೊಳ್ಳಬೇಕು ಜಾಗೃತ ಕಾರ್ಮಿಕ ವರ್ಗದ ಚಳುವಳಿ ಗ್ರಾಮಾಂತರ ಪ್ರದೇಶದಲ್ಲಿ ಹರಿಜನ, ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ತಡೆಹಿಡಿದು, ತನ್ನ ಪ್ರಭಾವ ಗ್ರಾಮಾಂತರ ಪ್ರದೇಶಗಳಲ್ಲೂ ಹರಡುವಂತೆ ಮಾಡಬಹುದು. ಹಾಗಾದ್ದಲ್ಲಿ ಈ ವರ್ಗದ ಜನರು ಕಾರ್ಮಿಕ ವರ್ಗಕ್ಕೆ ಬೆಂಬಲವಾಗಿ ನಿಲ್ಲಬಹುದು. ○

(3ನೇ ಪುಟ ನೋಡಿ)

ದ. ಕ. ಜಿಲ್ಲಾ ರೈತ ಸಮ್ಮೇಳನ

ದ. ಕ. ಜಿಲ್ಲಾ ರೈತ ಸಂಘದ (ಎಐಕೆಎಸ್) 8ನೇ ಜಿಲ್ಲಾ ಸಮ್ಮೇಳನವು ಮಾರ್ಚ್ 30 ಮತ್ತು 31 ರಂದು ಮಂಗಳೂರಿನಲ್ಲಿ ಜರಗಿತು.

ತಾ| 30 ರಂದು ಬೆಳಗ್ಗೆ 11 ಗಂಟೆಗೆ ಧ್ವಜಾರೋಹಣವನ್ನು ರಾಮಯ್ಯಗೌಡರು ನೆರವೇರಿಸಿದರು.

ಬಳಿಕ ಪ್ರತಿನಿಧಿ ಸಭೆ ಆರಂಭವಾಯಿತು ಪ್ರತಿನಿಧಿ ಸಭೆಯ ಅಧ್ಯಕ್ಷ ಮಂಡಲಿಗೆ ಶ್ರೀಗಳಾದ ಅಬ್ರಹಾಂ ಕರ್ಕಡ, ಪಾವೂರು ಬಾಬು ಮತ್ತು ರಾಮ ಕೆ. ಸುಂದರ್‌ರವರನ್ನು ಆಯ್ಕೆ ಮಾಡಲಾಯಿತು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ|| ಯು. ಜನಾರ್ಧನ ನ್ಯಾಕರು ಸ್ವಾಗತಿಸಿದರು.

ಪ್ರತಿನಿಧಿ ಸಭೆಯ ಉದ್ಘಾಟನಾ ಭಾಷಣ ಮಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾ| ಪಿ ರಾಮಚಂದ್ರರಾವ್‌ರವರು ದೇಶದ ಸ್ವಾತಂತ್ರ್ಯ ಒಳೀದ 38 ವರ್ಷ ಕಳೆದ ಮೇಲೂ ಭೂ ಮಾಲಕರ ಮತ್ತು ಸರಕಾರದ ವಶದಲ್ಲಿ ಲಕ್ಷಾಂತರ ಎಕರೆ ಭೂಮಿ ಇನ್ನೂ ಇದ್ದು ಭೂ ಹೀನರಿಗೆ ಹಾಗೂ ಕೃಷಿ ಕೂಲಿಗಾರರಿಗೆ ಭೂಮಿ ಹಂಚಿ ನ್ಯಾಯವಾದ ಶಾಸನಾತ್ಮಕ ಧೋರಣೆ ಜ್ಯಾರಿಯಾಗದೆ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಅಸಮಾನ ವ್ಯವಸ್ಥೆ ಮುಂದುವರಿಯುತ್ತಿದ್ದು ಇಂದಿನ ನಮ್ಮ ದೇಶದಲ್ಲಿರುವ ಭೂಮಾಲಕ ಬಂಡವಾಳಶಾಹಿ ವರ್ಗದ ಆಡಳಿತದಡಿಯಲ್ಲಿ ಇದಕ್ಕೆ ಪರಿಹಾರ ಸಿಗಲಾರದೆಂದೂ ಅವರು ನುಡಿದರು

ಕೃಷಿ ಕೂಲಿಗಾರರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅವರ ಮೇಲೆ ಭೂಮಾಲಕರ ಗೂಂಡಾಗಳಿಂದ ಹಿಂಸೆ ದಾಳಿ ನಡೆಯುತ್ತಿದೆ ರೈತರ ಬೆಳೆಗಳಿಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ ಅವರನ್ನು ಶೋಷಿಸಲಾಗುತ್ತಿದೆ ಕೇಂದ್ರ ಸರಕಾರವೇ ಬೆಲೆ ಏರಿಸಿ ತೆರಿಗೆ ಏರಿಸಿ ರೈತರ ಮೇಲೆ ಅಗಾಧವಾದ ಭಾರ ಹೇರಿ ಸಂಕಷ್ಟಕ್ಕೀಡು ಮಾಡುತ್ತಿದೆ.

ದೇಶದಲ್ಲಿ ಉತ್ಪಾದನಾ ಶಕ್ತಿ ವೃದ್ಧಿಸಿದರೂ ಇಂದು ದೇಶದಲ್ಲಿ ಎಲ್ಲರಿಗೂ ವಸತಿ, ಬಟ್ಟೆ, ಉದ್ಯೋಗ, ಆರೋಗ್ಯ ಲಭಿಸಿಲ್ಲ ದೇಶದಲ್ಲಿ ಇಂದು ಐಕ್ಯತೆ ಒಡೆದು ನಾಶವಾಗುತ್ತಿದೆ. ಆದುದರಿಂದ ಈ ದೇಶದ ಪ್ರತಿಯೊಬ್ಬ ರೈತನು ಸಂಘಟಿತನಾಗಿ ಗುತ್ತೇದಾರಿ ಆಡಳಿತ ವ್ಯವಸ್ಥೆಯನ್ನು ತೊಡೆದು ಹಾಕಿ ಪ್ರಜಾಸತ್ತೆಯನ್ನು ಪುನರ್ ಸ್ಥಾಪಿಸುವ ಮಹಾನ್ ಹೋರಾಟದಲ್ಲಿ ಭಾಗವಹಿಸಬೇಕೆಂದೂ ಅವರು ಕರೆ ನೀಡಿದರು ದೇಶದ ಬ್ಯಾಂಕುಗಳಲ್ಲಿರುವ ಕೋಟ್ಯಾಂತರ ರೂಪಾಯಿ ಬಡಜನರಿಗೆ ಗ್ರಾಮಾಂತರ ಪ್ರದೇಶದ ರೈತರಿಗೆ ಹೋಗದೆ ಬಂಡವಾಳ ಶಾಹಿಗಳ ಕೈಗೇ ಸೇರುತ್ತಿದೆ ಇದನ್ನೆಲ್ಲಾ ಬದಲಿಸಬೇಕಾದರೆ ವರ್ಗ ಹೋರಾಟದಿಂದ ಮಾತ್ರ ಸಾಧ್ಯ ಎಂದೂ ಅವರು ಹೇಳಿ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಿಶಾಲ ತಳಹದಿಯಲ್ಲಿ ರೈತ ಕೃಷಿ ಕೂಲಿಗಾರರನ್ನು ಸಂಘಟಿಸಬೇಕೆಂದೂ ಕರೆ ನೀಡಿದರು.

ಸೌಹಾರ್ದ ಪ್ರತಿನಿಧಿಗಳಾಗಿ ಬಂದ ವಿಮಾ ನೌಕರರ ಸಂಘದ ಮಂಗಳೂರು ಘಟಕದ ಶ್ರೀ ಪಾಂಡು ಮತ್ತು ಬ್ಯಾಂಕ್ ಎಂಪ್ಲಾಯಿಸ್ ಫೆಡರೇಶನಿನ ಮಂಗಳೂರು ಘಟಕದ ಶ್ರೀ ಬಿ ಎಂ. ಮಾಧವರವರೂ ಸಿ.ಐ.ಟಿ.ಯು ಜಿಲ್ಲಾ ಸಮಿತಿ ಉಪಾಧ್ಯಕ್ಷ ಬಿ ಮಾಧವ, ಎಸ್ ಎಫ್ ಐ ಜಿಲ್ಲಾ ಮಿತಿ ಕಾರ್ಯದರ್ಶಿ ಸುನಿಲ್ ನಾಟೇಕರ್, ಡಿವೈಎಫ್ಐ ಮಂಗಳೂರು ತಾಲೂಕು ಸಮಿತಿ ಕಾರ್ಯದರ್ಶಿ ಶಿವಾನಂದ ಕೋಡಿ ಮೊದಲಾದವರು ಸಂದೇಶ ನೀಡಿದರು

ಬಳಿಕ ಪ್ರತಿನಿಧಿಗಳ ಮುಂದೆ ಜಿಲ್ಲಾ ರೈತ ಸಂಘದ ಜತೆ ಕಾರ್ಯದರ್ಶಿ ಕಾ| ಕೆ. ಮೋನಪ್ಪ ಗೌಡ ವರದಿಯನ್ನಿತ್ತರು

ವರದಿಯ ಮೇಲೆ ಪ್ರತಿನಿಧಿಗಳು ಚರ್ಚಿಸಿ ಮಾತನಾಡಿದರು ಜಿಲ್ಲೆಯಲ್ಲಿ ರೈತ ಸಂಘಟನೆಯನ್ನು ಬಲಪಡಿಸುವ ಬಗ್ಗೆ ಸೂಚನೆ ನೀಡಿದರು

ಪ್ರತಿನಿಧಿಗಳನ್ನುದ್ದೇಶಿಸಿ ಸಿಪಿಐ (ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ| ಕೆ ಆರ್. ಶ್ರಿಯಾನ್, ಸಿಪಿಐ (ಎಂ) ಶಾಸಕ ಕಾ| ಎಂ ಆರ್. ವೆಂಕಟ್ರಾಮಯ್ಯನವರು ಭಾಷಣ ಮಾಡಿ ಜಿಲ್ಲೆಯಲ್ಲಿ ಪ್ರಬಲ ರೈತ, ಕೃಷಿ ಕೂಲಿಗಾರರ ಸಂಘಟನೆಯನ್ನು ಕಟ್ಟಿ ಅವರು ಇದಿರಿಸುತ್ತಿರುವ ಸಮಸ್ಯೆಗಳ ಬಗ್ಗೆ ತೀವ್ರ ಹೋರಾಟ ನಡೆಸಲೂ ಕರೆಯಿತ್ತರು.

ಬಳಿಕ ಸಮ್ಮೇಳನದಲ್ಲಿ ಕೇಂದ್ರ ಸರಕಾರದ ಬೆಲೆ ಏರಿಕೆಯ ವಿರುದ್ಧ, ಪರಿಹಾರ ಕಟ್ಟದ ರೈತರಿಗೆ ಉಚಿತವಾಗಿ ಭೂಮಿಯ ಒಡೆತನ ಸಿಗಬೇಕೆಂದು ಭೂ ಪರಿಹಾರ ಕಟ್ಟಲು ರೈತರು ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಮಾಡಿದ ಸಾಲ ರದ್ದಾಗಬೇಕೆಂಬ ಬಗ್ಗೆ ರೈತರು ಬೆಳೆಸಿದ ಬೆಳೆಗಳಿಗೆ ನ್ಯಾಯವಾದ ಬೆಲೆ ಬಗ್ಗೆ, ಮನೆ ನಿವೇಶನ ಹೊಂದಿದವರಿಗೆ ಹಕ್ಕು ಪತ್ರದ ಬಗ್ಗೆ, ದರ್ಖಾಸ್ತು ಭೂಮಿಯನ್ನು ಅವರವರಿಗೆ ಖಾಯಂಗೊಳಿಸಿ "ಡಿ" ನೋಟಿಸು ಕೊಡುವ ಬಗ್ಗೆ, ಭೂ ಸುಧಾರಣಾ ಕಾಯಿದೆ ಪ್ರಕಾರ ಭೂಮಿ ಕಳಕೊಂಡ ಸಣ್ಣ ಹಿಡುವಳಿದಾರರಿಗೆ ಸರ್ಕಾರವೇ ಪರಿಹಾರವನ್ನು ಕೊಡುವ ಬಗ್ಗೆ, ಕೃಷಿ ಕೂಲಿಗಾರರಿಗೆ ಕನಿಷ್ಟ ಕೂಲಿ, ಪೆನ್ಸನ್ ಜಾರಿಗೊಳಿಸುವ ಬಗ್ಗೆ ಟ್ರಿಬ್ಯೂನಲ್‌ಗಳಲಾಗುತ್ತಿರುವ ಭ್ರಷ್ಟಾಚಾರ ನಿಲ್ಲಿಸಿ ರೈತ ಸಂಘದ ಪ್ರತಿನಿಧಿ ಳನ್ನು ಹಾಕಿ ಅವನ್ನು ಪುನಸ್ರಚಿಸಲು ಒತ್ತಾಯಿಸಿ, ಕೃಷಿ ಕೂಲಿಗಾರರಿಗೆ 2 ಎ ಫಾರ್ಮ್‌ನಲ್ಲಿ ಅರ್ಜಿ ಸಲ್ಲಿಸಲು ಇನ್ನೂ ಮಾಯಿದೆ, ಪಟ್ಟಣಗಳಂತೆ ಗ್ರಾಮಾಂತರ ಪ್ರದೇಶಗಳಲ್ಲೂ ಏಕರೀತಿಯ ಪಡಿತರ ವ್ಯವಸ್ಥೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧಖೋರ ನೀತಿಯನ್ನು ಖಂಡಿಸಿ ಶಾಂತಿ ಚಳುವಳಿಯನ್ನು ಬೆಂಬಲಿಸಿ ನಿರ್ಣಯಗಳನ್ನು ಅಂಗೀಕರಿಸಲಾಗಿದೆ

ಜಿಲ್ಲಾ ರೈತ ಸಂಘದ ಅಧ್ಯಕ್ಷರಾಗಿ ಕಾಂ. ಕೆ ಆರ್. ಶ್ರಿಯಾನ್, ಉಪಾಧ್ಯಕ್ಷರಾಗಿ ಕಾಂ. ಯು. ಜನಾರ್ಧನ ನ್ಯಾಕ್, ಕೆ. ಸೂರ್ಯನಾರಾಯಣ ಭಟ್, ಜಿ ವಿಷ್ಣುಮೂರ್ತಿ, ಕಾರ್ಯದರ್ಶಿಯಾಗಿ ಕಾ. ಅಬ್ರಹಾಂ ಕರ್ಕಡ, ಜತೆ ಕಾರ್ಯದರ್ಶಿಯಾಗಿ ಕೆ ಮೋನಪ್ಪ ಗೌಡ, ಉಚ್ಚಿಲ ರಾಮಚಂದ್ರ, ಕೋಶಾಧಿಕಾರಿಯಾಗಿ ಡೇವಿಡ್ ಎ ಕರ್ಕಡ ಅಲ್ಲದೆ 23 ಮಂದಿಯ ಸಮಿತಿಯನ್ನು ಆರಿಸಲಾಗಿದೆ.

ಬೃಹತ್ ಸಾರ್ವಜನಿಕ ಸಭೆ

ಜಿಲ್ಲಾ ರೈತ ಸಮ್ಮೇಳನದ ಅಂಗವಾಗಿ ಮಂಗಳೂರು ನೆಹರೂ ಮೈದಾನಿನಲ್ಲಿ ಭಾರಿ ಬಹಿರಂಗ ಸಭೆ ಜರುಗಿತು. ಸಭಾ ಮುಂಚಿತವಾಗಿ ಠಾಗೋರ್ ಪಾರ್ಕ್‌ನಿಂದ ರೈತರ, ಕಾರ್ಮಿಕರ ಹಾಗೂ ವಿದ್ಯಾರ್ಥಿ- ಯುವಜನರ ಮೆರವಣಿಗೆ ಹೊರಟಿತು

ಬಹಿರಂಗ ಸಭೆಯ ಕಾರ್ಯಕ್ರಮವು ಪೀಪಲ್ಸ್ ಥಿಯೇಟರ್ಸ್ ಮಂಗಳೂರು ಇವರ ಕ್ರಾಂತಿಗೀತೆಗಳ ಹಾಡುವಿಕೆಯೊಂದಿಗೆ ಆರಂಭವಾಯಿತು.

ಕಾ| ಯು. ಜನಾರ್ಧನ ನ್ಯಾಕರು ಸ್ವಾಗತಿಸಿದರು.. ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ| ಕೆ ಆರ್. ಶ್ರೀಯಾನರು ಅಧ್ಯಕ್ಷತೆ ವಹಿಸಿದರು.

ಸಭೆಯನ್ನುದ್ದೇಶಿಸಿ ರೈತ ಮುಂದಾಳು ಕಾ| ಬಿ ಎಂ ರಾಮಯ್ಯಶೆಟ್ಟಿ ಶಾಸಕರಾದ ಆರ್. ವೆಂಕಟ್ರಾಮಯ್ಯ ಮತ್ತು ರಾಜ್ಯ ಕಿಸಾನ್ ಸಭಾದ ಅಧ್ಯಕ್ಷ ಕಾ| ಪಿ. ರಾಮಚಂದ್ರ ರಾವ್ ಭಾಷಣ ಮಾಡಿದರು.

ಹರಿಹರ :

ಮೈಸೂರು ಕಿರ್ಲೋಸ್ಕರ್‌ನಲ್ಲಿ ಸಿ.ಐ.ಟಿ.ಯು.ಗೆ ವಿಜಯ

ಕಾರ್ಮಿಕ ರಂಗದಲ್ಲಿ ಕಾರ್ಮಿಕ ವರ್ಗಕ್ಕೆ ಪರಕೀಯವಾದ ಸಿದ್ಧಾಂತಕ್ಕೂ ಕಾರ್ಮಿಕ ವರ್ಗದ ಕ್ರಾಂತಿಕಾರಿ ವರ್ಗಕ್ಕೂ ನಡುವೆ ಸಂಘರ್ಷ ನಿರಂತರವಾಗಿ ನಡೆಯುವುದು ಸಹಜ. ಹರಿಹರದಲ್ಲಿ ಪರಿಷ್ಕರಣವಾದೀ ಕಾರ್ಮಿಕಸಂಘಟನಾ ಮಾರ್ಗಕ್ಕೂ ಕ್ರಾಂತಿಕಾರಿ ಸಿ ಐ ಟಿ ಯು ಪಥಕ್ಕೂ ಸಂಘರ್ಷ ನಡೆದಿದೆ. ಸುತ್ತಲಿನ ಹಲವು ಪರಕೀಯ-ಪಾಳೆಯಗಾರಿ, ಪುಟ್ಟ ಬಂಡವಾಳಶಾಹಿ ಸಿದ್ಧಾಂತಗಳ ಒತ್ತಡ ತೀವ್ರವಾಗಿರುವುದರ ಮಧ್ಯೆ, ಸಿ ಐ ಟಿ ಯುವಿನ ಪದಾಧಿಕಾರಿಗಳು ಮತ್ತೆ ಮೈಸೂರು ಕಿರ್ಲೋಸ್ಕರ್ ಕಾರ್ಮಿಕ ಸಂಘದಲ್ಲಿ 29-3-86ರಂದು ಜಯಗಳಿಸಿದ್ದಾರೆ. ಕಾರ್ಮಿಕರೇ ಬಹುಸಂಖ್ಯೆಯಾಗಿರುವ ಹರಿಹರ ಪಟ್ಟಣದಲ್ಲಿ ನಡೆದ ಈ ಜಯ ಮಹತ್ವವುಳ್ಳದ್ದು.

ಇತ್ತೀಚಿಗೆ ಅಲ್ಲಿ ನಡೆದ ಗೌರವ ಸದಸ್ಯರಿಗಾಗಿ ನಡೆದ ಚುನಾವಣೆಗಳಲ್ಲಿ ಸಿ ಐ ಟಿ.ಯು ಅಭ್ಯರ್ಥಿಗಳು ಅಧಿಕ ಬಹುಮತದಿಂದ ವಿಜಯಿಗಳಾಗಿದ್ದರು.

29-3-86ರಂದು ನಡೆದ ಚುನಾವಣೆಯಲ್ಲಿ ಪದಾಧಿಕಾರಿಗಳಾಗಿ ಈ ಕೆಳಗಿನವರು ಆಯ್ಕೆಯಾಗಿದ್ದಾರೆ ಕಾ|| ವಿ ಜೆ ಕೆ. ನಾಯರ್, ಅಧ್ಯಕ್ಷರು. ಕಾ|| ನಿತ್ಯಾನಂದಸ್ವಾಮಿ, ಉಪಾಧ್ಯಕ್ಷರು ಕಾ|| ಸಿ. ಎಂ ಜಯಾನಂದ, ಕಾರ್ಯದರ್ಶಿ. ಕಾ|| ಜಕಣಾಚಾರಿ, ಸಹಕಾರ್ಯದರ್ಶಿ. ಕಾ|| ಹೆಚ್. ಕರಿಲಿಂಗಪ್ಪ, ಸಹಕಾರ್ಯದರ್ಶಿ, ಕಾ|| ಡಿ ವಿ ಜಯಣ್ಣ, ಖಜಾಂಚಿ ಎ. ಐ ಟಿ ಯು ಸಿ ನೇತೃತ್ವದ ಕೋಆರ್ಡಿನೇಷನ್ ಕಮಿಟಿ ಪರವಾಗಿ ಪದಾಧಿಕಾರಿ ಸ್ಥಾನಗಳಿಗೆ ಸ್ಪರ್ಧಿಸಿದ ಎಲ್ಲ ಅಭ್ಯರ್ಥಿಗಳು ಸೋತಿದ್ದಾರೆ.

ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಿದ್ದ ಸಿ.ಐ ಟಿ ಯು ವಿನ ಇಪ್ಪತ್ತು ಅಭ್ಯರ್ಥಿಗಳಲ್ಲಿ ಹನ್ನೊಂದು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಮತಗಳ ಎಣಿಕೆ ಮುಗಿದ ನಂತರ ಹರಿಹರದ ವಿವಿಧ ಸಂಘಗಳ ಕಾರ್ಮಿಕರು ಹಾಗೂ ಸಿ.ಐ ಟಿ ಯು ಅಭಿಮಾನಿಗಳು ಮೆರವಣಿಗೆಯೊಂದನ್ನು ಹೊರಡಿಸಿ ವಿಜಯೋತ್ಸವವನ್ನು ಆಚರಿಸಿದರು ಈ ಪ್ರದೇಶದ ಕಾರ್ಮಿಕ ಚಳುವಳಿಯ ಮುನ್ನಡೆಯ ದೃಷ್ಟಿಯಿಂದ ಸಿ ಐ ಟಿ ಯುವಿನ ಈ ಗೆಲುವು ಮಹತ್ವಪೂರ್ಣದ್ದಾಗಿರುತ್ತದೆ.

ಡಿ.ವೈ.ಎಫ್.ಐ. ರಾಜ್ಯ ಸಮಿತಿಯ ತೀರ್ಮಾನಗಳು

1986 ಮಾರ್ಚ್ 28 ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಅಧ್ಯಕ್ಷರಾದ ಮಹಾಬಲ ವಡೇರ ಹೊಬ್ಳಿ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕೇಂದ್ರ ಸಮಿತಿಯ ಸಹ ಕಾರ್ಯದರ್ಶಿ ಹಾಗೂ ಸಂಸತ್ ಸದಸ್ಯ ಎಂ.ಎ. ಬೇಬಿ ಅವರು ಸಭೆಗೆ ಮಾರ್ಗದರ್ಶನ ನೀಡಿದರು.

ಸ್ವೀಡನ್ನಿನ ಪ್ರಧಾನಿ, ವಿಶ್ವಶಾಂತಿಯ ಪ್ರತಿಪಾದಕ ಶ್ರೀ ಪಾಮೆ ಅವರ ಹತ್ಯೆಯನ್ನು ಖಂಡಿಸಿದ ರಾಜ್ಯ ಸಮಿತಿಯು ಶ್ರದ್ಧಾಂಜಲಿ ಅರ್ಪಿಸಿತು.

ನಿರುದ್ಯೋಗ ವಿರೋಧಿ ದಿನಾಚರಣೆಯ ಬೆಂಗಳೂರಿನ ರ್‍ಯಾಲಿಯ ವಿಷಯವಾಗಿ ಸಂಘಟಿಸಿದ ಎಲ್ಲಾ ಸಮಿತಿಗಳಿಗೂ ಹಾಗೂ ಟ್ರೈನಿನ ಅವ್ಯವಸ್ಥೆಯಿಂದಾಗಿ ಸಕಾಲಕ್ಕೆ ತಲುಪಲಾಗದೆ ಇದ್ದ ರಾಯಚೂರು, ಬಳ್ಳಾರಿ ಸಂಗಾತಿಗಳಿಗೆ ಅಭಿನಂದಿಸಿ, ರ್‍ಯಾಲಿಯನ್ನು ಮುಗಿಸಿಕೊಂಡು ವಾಪಸ್ ಆಗುತ್ತಿದ್ದ ಶಿವಮೊಗ್ಗ ಜಿಲ್ಲೆಯ 400 ಸಂಗಾತಿಗಳನ್ನು ಮತ್ತು ಎಲ್. ರಂಗೇಗೌಡ, ಎಸ್. ಬಿ ಶಿವಶಂಕರ್ ಅವರುಗಳನ್ನು ಅರಸೀಕೆರೆಯಲ್ಲಿ ಬಂಧಿಸಿದ ಪೋಲೀಸರನ್ನು ಖಂಡಿಸಿದೆ.

ಏಪ್ರಿಲ್ ಹತ್ತರಿಂದ ಮೇ ಇಪ್ಪತ್ತರೊಳಗೆ 1986ರ ಸದಸ್ಯತ್ವವನ್ನು ಮುಗಿಸಬೇಕೆಂದೂ, ಎಲ್ಲಾ ಘಟಕಗಳು ಈ ಒಂದು ತಿಂಗಳಷ್ಟು ಮುಡಿಪಾಗಿಡಬೇಕೆಂದೂ ರಾಜ್ಯ ಸಮಿತಿಯು ತೀರ್ಮಾನಿಸಿದೆ. ರಸೀದಿಗಳನ್ನು ರಾಜ್ಯ ಸಮಿತಿಯ ಲೆಕ್ಕ ಮತ್ತು ಹೆಸರಿನಲ್ಲಿ ಎಲ್ಲಾ ಜಿಲ್ಲಾ ಸಮಿತಿಗಳು ಮುದ್ರಿಸಿಕೊಳ್ಳಬೇಕೆಂದೂ ಮಾದರಿ ಕರಪತ್ರವನ್ನು ರಾಜ್ಯ ಕಾರ್ಯದರ್ಶಿಗಳು ಒದಗಿಸುವರೆಂದು ತೀರ್ಮಾನಿಸಲಾಗಿದೆ.

ಯೂತ್ ಸ್ಟ್ರೀಂ ಪತ್ರಿಕೆಯ ಚಂದಾ ಹಾಗೂ ಬಿಡಿ ಪತ್ರಿಕೆಗಳನ್ನು ಹೆಚ್ಚು ಮಾಡಬೇಕೆಂದು ತೀರ್ಮಾನಿಸಿದೆ. ಯೂತ್ ಸ್ಟ್ರೀಂ ಪತ್ರಿಕೆಯು 17-4-1986ರೊಳಗೆ ಬೆಂಗಳೂರಿಗೆ ಒಟ್ಟಾಗಿ ಬರಲಿದೆ. ಅದನ್ನು ಜಿಲ್ಲಾ ಕೋಟಾ ಆಧಾರದಲ್ಲಿ ಹಂಚಬೇಕು. ಹಾಗೂ ಯಾರೂ ಬಾಕಿಯನ್ನು ಉಳಿಸಿಕೊಳ್ಳಬಾರದೆಂದು ರಾಜ್ಯ ಸಮಿತಿಯು ವಿನಂತಿಸಿದೆ.

ಸಿ. ಐ. ಟಿ. ಯು. ಮೇ ದಿನದ ಪ್ರಣಾಳಿಕೆ

(5ನೇ ಪುಟದಿಂದ)

ಪಶ್ಚಿಮ ಬಂಗಾಳ ಹಾಗೂ ತ್ರಿಪುರಾದ ಎಡರಂಗ ಸರ್ಕಾರಗಳ ವಿರುದ್ಧ ಕೇಂದ್ರ ಸರಕಾರದ ಎಲ್ಲಾ ಪಿತೂರಿಗಳನ್ನು ನಿಷ್ಫಲಗೊಳಿಸಲು ಅದು ನಿರ್ಧರಿಸಬೇಕು.

ಈ ಶಕ್ತಿಗಳು ರಾಷ್ಟ್ರೀಯ ಹಾಗೂ ವರ್ಗ ಐಕ್ಯತೆಗೆ ಉಂಟು ಮಾಡಿರುವ ದೊಡ್ಡ ಅಪಾಯವನ್ನು ನಾವು ಪಂಜಾಬ್ ಮತ್ತು ಅಸ್ಸಾಂಗಳಲ್ಲಿನ ಘಟನೆಗಳಿಂದ ಅರಿತುಕೊಳ್ಳಬಹುದು. ಈ ಎರಡು ರಾಜ್ಯಗಳ ಕಾರ್ಮಿಕ ವರ್ಗ ಹಾಗೂ ತಮಿಳುನಾಡಿನ ಕಾರ್ಮಿಕ ವರ್ಗವನ್ನು ಸಿ.ಐ ಟಿ ಯು ವಿಚ್ಛಿದ್ರಕಾರಿ ಹಾಗೂ ಪ್ರಾದೇಶಿಕ ಸಂಕುಚಿತವಾದದ ಶಕ್ತಿಗಳ ವಿರುದ್ಧ ಅವರು ನಡೆಸಿದ ಧೀರ ಹೋರಾಟಕ್ಕಾಗಿ ಅಭಿನಂದಿಸುತ್ತದೆ.

ಮೇ ದಿನದಂದು ಕಾರ್ಮಿಕ ವರ್ಗ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುವ, ನಮ್ಮ ಜನಗಳ ವಿರುದ್ಧ ಸಾಮ್ರಾಜ್ಯಶಾಹೀ ಕುತಂತ್ರಗಳನ್ನು ಸೋಲಿಸುವ ಮತ್ತು ನಮ್ಮ ಆರ್ಥಿಕ ಸ್ವಾಧೀನತೆಯನ್ನು ಹಾಗೂ ಅಲಿಪ್ತತೆಯ ನಮ್ಮ ವಿದೇಶೀ ಧೋರಣೆಯನ್ನೂ ಪೇಲವಗೊಳಿಸುವ ಎಲ್ಲಾ ಕ್ರಮಗಳ ವಿರುದ್ಧ ಹೋರಾಡುವ ತನ್ನ ದೃಢ ನಿರ್ಧಾರವನ್ನು ವ್ಯಕ್ತಪಡಿಸಬೇಕು

ನಮ್ಮ ವಿದೇಶಾಂಗ ನೀತಿಯವಿರುದ್ಧ ನಿರಂತರ ಒತ್ತಡ ಹಾಗೂ ಅದಾಗಲೇ ಚಂಚಲತೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಕಾರ್ಮಿಕವರ್ಗ ನಮ್ಮ ವಿದೇಶಾಂಗ ನೀತಿಯ ನಿರ್ವಹಣೆಯ ಬಗ್ಗೆ, ಜಾಗರೂಕತೆಯಿಂದ ಒಂದು ಕಣ್ಣಿಟ್ಟಿರಬೇಕು

ಅಜೇಯ ಐಕ್ಯತೆ ಕಟ್ಟಬೇಕು

ಮೇ ದಿನದ ಶತಮಾನೋತ್ಸವದಂದು ಸಿ.ಐ.ಟಿ ಯು. ಸಮಸ್ತ ಕಾರ್ಮಿಕ ವರ್ಗಕ್ಕೆ ತನ್ನ ತಕ್ಷಣದ ಹಿತಾಸಕ್ತಿಗಳನ್ನು ಯಶಸ್ವಿಯಾಗಿ ರಕ್ಷಿಸಿಕೊಳ್ಳಲು ಮಾತ್ರವೇ ಅಲ್ಲ, ಸಮಾಜವಾದದ, ರಾಜಕೀಯ ಅಧಿಕಾರ ಕಿತ್ತುಕೊಳ್ಳುವ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆಂದೋಲನ ರಾಷ್ಟ್ರೀಯ ಪಾತಳಿಯಲ್ಲಿ ತನ್ನ ತಕ್ಷಣದ ಜವಾಬ್ದಾರಿಗಳನ್ನು ನಿರ್ವಹಿಸಲು ಅನುಕೂಲ ಮಾಡಿಕೊಡುವ ಕಾರ್ಮಿಕ ಸಂಘಟನೆಗಳ ಐಕ್ಯತೆಯನ್ನು, ಅಜೇಯ ಐಕ್ಯತೆಯನ್ನು ಕಟ್ಟಿ ಬೆಳೆಸಲು ಕರೆ ನೀಡುತ್ತದೆ.

ಕಾರ್ಮಿಕ ಸಂಘಗಳ ಐಕ್ಯತೆಯ ಸದ್ಯದ ಮಟ್ಟವನ್ನು ಪ್ರತಿನಿಧಿಸುವ ರಾಷ್ಟ್ರೀಯ ಆಂದೋಲನ ಸಮಿತಿ ಕೇವಲ ತಕ್ಷಣದ ಪ್ರಶ್ನೆಗಳ ಬಗೆಗಷ್ಟೇ ಯೋಚಿಸಿ ದೇಶ, ಜನತೆ ಹಾಗೂ ಅಂತರರಾಷ್ಟ್ರೀಯ ಆಂದೋಲನ ಎದುರಿಸುತ್ತಿರುವ ಸಮಸ್ಯೆಗಳನ್ನು ಬದಿಗೊತ್ತಿದೆ. ಯುದ್ಧ ಮತ್ತು ಶಾಂತಿ, ಜನತೆಯ ವಿರುದ್ಧ ಸಾಮ್ರಾಜ್ಯಶಾಹೀ ಪಿತೂರಿಗಳು, ರಾಷ್ಟ್ರೀಯ ಐಕ್ಯತೆಯ ರಕ್ಷಣೆ ವಿಭಜಕ ಹಾಗೂ ಕೋಮುವಾದೀ ಶಕ್ತಿಗಳನ್ನು ಬಯಲಿಗೆಳೆಯುವುದು ಮತ್ತು ರೈತರ ಹಾಗೂ ಗ್ರಾಮಾಂತರ ಜನಸಮೂಹಗಳ ರಕ್ಷಣೆ ಮುಂತಾದ ಪ್ರಶ್ನೆಗಳ ಬಗ್ಗೆ ಏಕ ಕಂಠದಿಂದ ಮಾತನಾಡುವ ಸಾಮರ್ಥ್ಯ ಅದಕ್ಕಿಲ್ಲ ಈ ಮಿತಿಗಳನ್ನು ನಿವಾರಿಸದಿದ್ದರೆ ಅದಕ್ಕೆ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸಲೂ ಸಾಧ್ಯವಾಗಲಿಕ್ಕಿಲ್ಲ ಮತ್ತು ಭಾರತದ ಶ್ರಮಜೀವಿ ಜನತೆಯ ಆಶೋತ್ತರಗಳಿಗೆ ಅಭಿವ್ಯಕ್ತಿ ನೀಡುವ ಒಂದು ಶಕ್ತಿಯಾಗುವುದು ಕೂಡಾ ಅದಕ್ಕೆ ಸಾಧ್ಯವಾಗಲಿಕ್ಕಿಲ್ಲ.

ಸಿ ಐ ಟಿ.ಯು. ಕಾರ್ಮಿಕ ಸಂಘಗಳ ಐಕ್ಯತೆಯ ಹರಹನ್ನು ವ್ಯಾಪಕಗೊಳಿಸಿ, ಆಳಗೊಳಿಸಬೇಕೆಂದು ಎಲ್ಲಾ ಸಂಘಗಳಿಗೆ, ಇತರ ಸೋದರ ಸಂಘಟನೆಗಳು ಹಾಗೂ ಮಹಾ ಸಂಘಗಳಿಗೆ ಕರೆ ನೀಡುತ್ತದೆ.

ಸಿ.ಐ ಟಿ ಯು ಯುದ್ಧಕ್ಕೆವಿರೋಧ, ವಿಭಾಜಕ ಶಕ್ತಿಗಳಿಗೆ ವಿರೋಧ ಹಾಗೂ ವರ್ಣದ್ವೇಷ ನೀತಿಗೆ ವಿರೋಧ ವ್ಯಕ್ತಪಡಿಸಿ ಕಾರ್ಮಿಕ ಸಂಘಟನೆಗಳ ಒಂದು ಸರ್ವಸಾಮಾನ್ಯ ಸಂಯುಕ್ತ ಕಾರ್ಯಾಚರಣೆಗಳನ್ನು ಬೆಳೆಸಲು ಇಂಟಕ್ ಮುಂದಡಿಯಿಟ್ಟಿರುವ ಬಗ್ಗೆ ಅದನ್ನು ಅಭಿನಂದಿಸುತ್ತದೆ. ಸಂಯುಕ್ತ ಕಾರ್ಮಿಕ ಸಂಘಟನೆಯ ಆಂದೋಲನ ಈ ದಿಕ್ಕಿನಲ್ಲಿ ತಿರುಗಿ ಯುದ್ಧದ ವಿರುದ್ಧ, ರಾಷ್ಟ್ರೀಯ ದಮನದ ವಿರುದ್ಧ ಹಾಗೂ ನಮ್ಮ ದೇಶದ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ತನ್ನ ಪೂರ್ಣ ಶಕ್ತಿಗಳನ್ನು ಬಳಸಬೇಕು

ನಮ್ಮ ಕಾರ್ಮಿಕ ವರ್ಗದ ದನಿ ಇತರ ದೇಶಗಳಲ್ಲಿ ಜಾಗತಿಕ ಶಾಂತಿಗಾಗಿ ನಡೆಯುತ್ತಿರುವ ಮಹಾನ್ ಆಂದೋಲನದೊಂದಿಗೆ ಸೇರಿಕೊಳ್ಳಲು ಸಾಧ್ಯವಾಗುವಂತೆ ನಮ್ಮ ಕಾರ್ಮಿಕರ ನಡುವೆ ಒಂದು ತೀವ್ರ ಶಾಂತಿ ಪ್ರಚಾರ ನಡೆಸುವಂತಾಗಲು ಸಂಯುಕ್ತ ಕಾರ್ಮಿಕ ವರ್ಗದ ಆಂದೋಲನ ಕ್ರಮ ಕೈಗೊಳ್ಳಬೇಕು

ನಮ್ಮ ದೇಶದಲ್ಲಿ ಈ ಕೆಲಸ ಬೇರೆಡೆಗೆ ಹೋಲಿಸಿದರೆ ಸುಲಭವಾದುದು. ಏಕೆಂದರೆ ಆಳುವ ಪಕ್ಷ ಹಾಗೂ ಅದರ ನೇತೃತ್ವದ ಸರಕಾರ ಅಲಿಪ್ತ ನೀತಿ ಹಾಗೂ ಶಾಂತಿಯ ಧೋರಣೆ ಅನುಸರಿಸುತ್ತಿದೆ ಹಾಗೂ ಎಲ್ಲಾ ಯುದ್ಧ ಪ್ರಯತ್ನಗಳನ್ನು ವಿರೋಧಿಸುತ್ತಿದೆ. ಕಾರ್ಮಿಕ ಸಂಯುಕ್ತ ಸಂಘಗಳ ಆಂದೋಲನ ಮುಂದಡಿಯಿಟ್ಟು ನೇತೃತ್ವ ವಹಿಸಿದರೆ ನಮ್ಮ ದೇಶದ ಶಾಂತಿ ಆಂದೋಲನ ನಮ್ಮ ಎಲ್ಲಾ ಜನವಿಭಾಗಗಳನ್ನು ಒಳಗೊಂಡ ಒಂದು ಸರ್ವವ್ಯಾಪಿ ಆಂದೋಲನವಾಗುವುದು ಸಾಧ್ಯವಿದೆ

ಮೇದಿನ ಶತಮಾನೋತ್ಸವದಂದು ಸಿ ಐ ಟಿ ಯು ಮತ್ತು ಕಾರ್ಮಿಕವರ್ಗ ಕಾರ್ಮಿಕವರ್ಗದ ಅಂತರರಾಷ್ಟ್ರೀಯತೆಯ ಬಾವುಟವನ್ನು, ಯುದ್ಧ ಹಾಗೂ ರಾಷ್ಟ್ರೀಯ ಶೋಷಣೆಯ ವಿರುದ್ಧ, ಶಾಂತಿ ಪ್ರಜಾಪ್ರಭುತ್ವ ಹಾಗೂ ಸಮಾಜವಾದಕ್ಕಾಗಿ ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಸೌಹಾರ್ದದ ಬಾವುಟವನ್ನು ಎತ್ತಿ ಹಿಡಿಯುತ್ತದೆ. ○

ಉತ್ಪಾದನೆ ಮತ್ತು ಉದ್ಯೋಗ

(2ನೇ ಪುಟದಿಂದ)

ಳಿಸಬೇಕು. ರೈತ-ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳಿಗೆ ಈ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಪ್ರಾತಿನಿಧ್ಯವಿರಬೇಕು.

6. ವಿದೇಶಿ ವಿನಿಮಯ ಉಳಿತಾಯ ಮಾಡಲು, ಅನಗತ್ಯದ ಸಾಮಗ್ರಿಗಳ ತಂತ್ರಜ್ಞಾನದ ಆಮದನ್ನು ನಿಲ್ಲಿಸಬೇಕು.

7. ಕಳ್ಳ ಸಂತೆಗಾರರ, ಕಪ್ಪು ಹಣವಂತರ, ಅಕ್ರಮ ಸಂಗ್ರಹಕಾರರ, ಅಕ್ರಮ ಸಾಗಣೆಗೆದಾರರ, ತೆರಿಗೆಗಳ್ಳರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

8. ಬೆಲೆ ಏರಿಕೆ, ಹಣದುಬ್ಬರವನ್ನು ತಡೆಯಲು ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆ ಭಾರ ಗಣನೀಯವಾಗಿ ಕಡಿಮೆ ಮಾಡಬೇಕು. ಆಹಾರಧಾನ್ಯ ಬಟ್ಟೆ, ಅಡಿಗೆ ತೈಲ, ಸೀಮೆಎಣ್ಣೆ ಇತ್ಯಾದಿ ಜೀವನಾವಶ್ಯಕ ವಸ್ತುಗಳನ್ನು ವ್ಯಾಪಕವಾಗಿ ನ್ಯಾಯ ಬೆಲೆಗಳಲ್ಲಿ ದೇಶಾದ್ಯಂತ ಸಾರ್ವಜನಿಕ ವಿತರಣೆಯ ಮೂಲಕ ಜನಸಾಮಾನ್ಯರಿಗೆ ಒದಗಿಸಬೇಕು. ಗ್ರಾಮೀಣ ಪ್ರದೇಶಗಳಿಗೂ ಸಾರ್ವಜನಿಕ ವಿತರಣೆಯ ವ್ಯವಸ್ಥೆಯನ್ನು ವಿಸ್ತರಿಸಬೇಕು.

9. ಸಾರ್ವಜನಿಕ ಕ್ಷೇತ್ರವನ್ನು ಸಾಮ್ರಾಜ್ಯಶಾಹಿಗಳ ವಿರುದ್ಧ, ಗುತ್ತೇದಾರಿ ಬಂಡವಾಳದ ವಿರುದ್ಧ ಬಳಸಬೇಕು ಸ್ವಾವಲಂಬನೆಗಾಗಿ, ದುಡಿಯುವ ಜನರ ಪರವಾಗಿ ಬಳಸಬೇಕು. ಇವುಗಳ ಆಡಳಿತವನ್ನು ಹೆಚ್ಚು ಪ್ರಜಾಪ್ರಭುತ್ವಗೊಳಿಸಬೇಕು, ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳಿಗೇ ಹೆಚ್ಚು ಪ್ರಾತಿನಿಧ್ಯ ನೀಡಬೇಕು ಸಾರ್ವಜನಿಕ ಸಂಸ್ಥೆಗಳು ಜನರಿಗೆ ಮತ್ತು ಸಂಸತ್ತಿಗೆ ಮಾತ್ರ ಹೊಣೆಯಾಗಿರಬೇಕು ವಿಶ್ವಬ್ಯಾಂಕ್‌ಗಲ್ಲ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಲ್ಲ.

10. ಸ್ವಾವಲಂಬನೆಯ, ಸಾರ್ವಜನಿಕ ರಂಗದ ಆದ್ಯತೆಯ, ಭೂಸುಧಾರಣೆಯ, ಹೆಚ್ಚು ಉದ್ಯೋಗ ನೀಡುವ, ಸುಖಭೋಗ ವಸ್ತುಗಳ ಉತ್ಪಾದನೆಗಿಂತ ಜೀವನಾವಶ್ಯಕ ವಸ್ತುಗಳನ್ನು ಹೆಚ್ಚಿಸಿ ಉತ್ಪಾದಿಸುವ, ಜನಪರ ಕಾರ್ಯಕ್ರಮಗಳನ್ನು ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ಬಹುರಾಷ್ಟ್ರೀಯ ಸಂಸ್ಥೆಗಳು, ಗುತ್ತೇದಾರಿ ಬಂಡವಾಳಶಾಹಿಗಳು, ಭೂಮಾಲೀಕರು ವಿರೋಧಿಸುವರು ಅದರ ವಿರುದ್ಧ ಜನಶಕ್ತಿಯನ್ನು ಸಂಘಟಿಸಬೇಕು.

(ಮುಗಿಯಿತು)

‘ಅಲ್ಪ ಲಾಭಕ್ಕಾಗಿ ಜಾತೀಯ ಶಕ್ತಿಗಳೊಡನೆ ಕಾಂಗ್ರೆಸ್ಸಿನ ಸಖ್ಯತೆ’

(1ನೇ ಪುಟದಿಂದ)

ಶಕ್ತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿವೆ.

ದೇಶದ ಹಿತವನ್ನು ಕಡೆಗಣಿಸಿ ತನ್ನ ಅಲ್ಪ ಲಾಭಕ್ಕಾಗಿ ಇಂಥ ಶಕ್ತಿಗಳೊಡನೆ ಒಪ್ಪಂದ ಮಾಡಿಕೊಳ್ಳುತ್ತಿದೆ ಕಾಂಗ್ರೆಸ್. ಆ ಕಾರಣದಿಂದಲೇ ಕಾಶ್ಮೀರದಲ್ಲಿ ಜಾತೀಯ ದೃಷ್ಟಿಕೋನದ ಶಹಾ ಸರಕಾರಕ್ಕೆ ಬೆಂಬಲ ನೀಡಿದ್ದರು. ಕೇರಳದಲ್ಲಿ ಎರಡು ಸಂಘಟಿತ ಶಕ್ತಿಗಳಿಗೆ ಮೊರೆ ಹೋಗಿ ಅಧಿಕಾರ ನಡೆಸುತ್ತಿದೆ. ರಾಮ ಜನ್ಮಭೂಮಿ – ಬಬ್ರಿ ಮಸ್‌ಜೀದ ಪ್ರಶ್ನೆಯನ್ನು ಇಂದಿನ ಪರಿಸ್ಥಿತಿಯ ಮಧ್ಯದಲ್ಲಿ ಎತ್ತಿ ಸಾದಾ ಮುಸಲ್ಮಾನರ ಭಾವನೆಗಳನ್ನು ಕೆದರಿರುವುದು ಹುಚ್ಚುತನವಲ್ಲವೇ ? ಈ ತಕರಾರನ್ನು ಬಗೆ ಹರಿಸದೆ ಮೇಲಿನ ನ್ಯಾಯಾಂಗಕ್ಕೆ ಅಪೀಲು ಮಾಡಿದ್ದ ಪಕ್ಷದಲ್ಲಿ ದೇಶದ ಐಕ್ಯತೆಗೆ ಗಂಡಾಂತರ ಉಂಟಾಗುತ್ತಿತ್ತೇ ? ಧಾರ್ಮಿಕ ಮುಸಲ್ಮಾನರಿಗೆ ಶರಣು ಹೋಗುವುದಾಗಲೀ ಮುಸ್ಲಿಂ ಮಹಿಳೆಯರ ಮಾನವೀಯ ಸೌಖ್ಯ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳನ್ನು ಬಿಟ್ಟುಕೊಡುವುದು ದೇಶದ ಐಕ್ಯತೆಯನ್ನು ರಕ್ಷಿಸಿದಂತಾಗುತ್ತದೆಯೇ ?

ನಮ್ಮ ದೇಶದ ವಿಭಜನೆಯ ಬೆದರಿಕೆಯನ್ನೆದುರಿಸುತ್ತಿರುವಾಗಲೇ ರಾಷ್ಟ್ರೀಯ ಭಾವೈಕ್ಯ ಸಮಿತಿಯ ಸಭೆ ನಡೆಯುತ್ತಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ, ಹಾಗೂ 1947ರಲ್ಲಿ ದೇಶ ವಿಭಜನೆಯಾದ ದುಃಖದ ಘಟನೆಯ ನಂತರ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಇಂದಿನಷ್ಟೇ ಗಂಭೀರ ಪರಿಸ್ಥಿತಿಯನ್ನೆದುರಿಸುವಂತಾಗಿರಲಿಲ್ಲ "ಭಾಯಿ - ಭಾಯಿ" ಎಂಬ ಮಂತ್ರದಿಂದಾಗಲೀ, ಐಕ್ಯತೆಗಾಗಿರುವ ಎಲ್ಲರ ಒಳ್ಳೆಯ ಮನೋಭಾವನೆಗಳಾಗಲೀ ಜಾತೀಯ ದ್ವೇಷವನ್ನು ಶಮನಗೊಳಿಸಲಾರವು ಆಳವಾದ ಶಕ್ತಿಗಳು ಕೆಲಸ ಮಾಡುತ್ತಿವೆ. ಅವರಿಗೆ ವಿದೇಶಗಳಿಂದ ಹಣ ಬರುತ್ತಿದೆ. ಅವರೆಲ್ಲ ಧರ್ಮ ಪಂಥರಾಗಿ ಕೆಲಸ ಮಾಡುತ್ತಾರೆ, ಶೈಕ್ಷಣಿಕ ಸಂಸ್ಥೆಗಳ ಮೂಲಕ ಅವು ಕಾರ್ಯ ನಡೆಸುತ್ತಿವೆ, ಸ್ವಯಂ ಸೇವಕ ಸಂಸ್ಥೆಗಳ ಸೋಗಿನಲ್ಲಿ ಅವು ಕೆಲಸ ನಡೆಸಿವೆ ಅವೆಲ್ಲವುಗಳ ಉದ್ದೇಶ ಒಂದೇ, ಅದೇನೆಂದರೆ ದೇಶದ ಐಕ್ಯತೆಯನ್ನು ನಾಶಮಾಡುವುದಾಗಿದೆ.

ಭಾರತದ ವಿಭಜನೆಯ ಒಳಸಂಚಿನ ಪ್ರಶ್ನೆ ಬರೀ ಆಂತರಿಕ ಸಮಸ್ಯೆ ಅಷ್ಟೆ; ವಿದೇಶಗಳ ಹಣ ಮತ್ತು ಯೋಜನೆಗಳಿಗೆ ಸಂಬಂಧವಿಲ್ಲೆಂದು ತಿಳಿಯುವದೆಂದರೆ ನಮಗೆ ನಾವೇ ಮೋಸ ಮಾಡಿದಂತೆ. ಭಾರತದಲ್ಲಿ ಭಯೋತ್ಪಾದಕತೆಯ ಕೃತ್ಯಗಳನ್ನ ಮಾಡುವುದರ ಸಲುವಾಗಿಯೇ ಪಾಕಿಸ್ತಾನ ಸಿಖ್ ಪ್ರತ್ಯೇಕತಾವಾದಿಗಳಿಗೆ ಟ್ರೈನಿಂಗ್ ನೀಡುತ್ತಿದೆಂಬುದನ್ನು ಜವಾಬ್ದಾರಿ ವ್ಯಕ್ತಿಗಳು ಮನವರಿಕೆ ಮಾಡಿಕೊಂಡಿದ್ದಾರೆ. ಪಾಕಿಸ್ತಾನ ಸರ್ವಾಧಿಕಾರಿಯ ಧೋರಣೆಯ ಹಿಂದೆ ಅಮೇರಿಕದ ನಿಜವಾದ ಶಕ್ತಿ ಇದೆಂಬುದನ್ನು ಮಾತ್ರ ಯಾರೂ ಹೇಳುತ್ತಿಲ್ಲ. ಇಂದಿರಾಗಾಂಧಿಯವರ ಕೊಲೆಯ ನಂತರ ಕೂಡ ಇಂಥ ನಾಚಿಕೆ ಮುಂದುವರೆಯುತ್ತಿದೆ.

ಇತ್ತೀಚೆಗೆ ಸ್ವಾತಂತ್ರ್ಯ ಪಡೆದ ದೇಶಗಳನ್ನು ಅಭದ್ರಗೊಳಿಸುವುದು ಅಮೇರಿಕದ ನೀತಿಯಾಗಿದೆ. ಈ ಉಪಖಂಡದಲ್ಲಿ ಅದನ್ನು ಉತ್ತಮ ರೀತಿಯಲ್ಲಿ ಜಾರಿಯಲ್ಲಿ ತರುತ್ತಿದೆ ಅಮೇರಿಕ. ದೇಶದ ಸುತ್ತ ಭಾರತ ವಿರೋಧಿ ಶಕ್ತಿಗಳನ್ನು ನೆಲೆಸಿ, ನಮ್ಮಲ್ಲಿಯ ಹಿಂದುಳಿದಿರುವಿಕೆಯ, ಮೂಢ ನಂಬಿಕೆಯ ದುರುಪಯೋಗ ಪಡಿಸಿಕೊಂಡು ವಿಭಜನೆ ಕಾರ್ಯದಲ್ಲಿ ತೊಡಗಿದೆ. ಜಾತೀಯತೆ, ಧರ್ಮಾಂಧತೆಗಳೆಲ್ಲ ನಮ್ಮಲ್ಲಿ ಬಹಳ ದಿವಸಗಳಿಂದ ನೆಲೆಸಿವೆ. ಸಮಯ ಕಳೆದಂತೆ ಅವುಗಳನ್ನೆಲ್ಲ ನಾಶ ಮಾಡಬಹುದೆಂದು ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಭಾವಿಸಲಾಗಿತ್ತು. ಅವು ತಲೆ ಎತ್ತಿದಾಗ, ಐಕ್ಯತೆಗಾಗಿ ಕರೆ ಕೊಟ್ಟರೆ ಸಾಕೆಂದು ತಿಳಿಯಲಾಗಿತ್ತು. ಅಂಥ ಮನೋಭಾವ ಅಪಾಯಕಾರಿ ಎಂದು ಕಂಡು ಬರುತ್ತಿದೆ. ಸಾಮ್ರಾಜ್ಯಶಾಹಿಗಳ ವಿಭಜಕ ಯೋಜನೆಗಳಿಗೆ ಈ ಶಕ್ತಿಗಳೇ ಸಾಧನಗಳಾಗಿವೆಂಬುದನ್ನು ಈಗ ಕಾಣಬಹುದು. ಆದ್ದರಿಂದ ದೇಶದ ಭಾವೈಕ್ಯತೆಯ ಪ್ರಶ್ನೆಯನ್ನು ಚರ್ಚಿಸುವಾಗ ಈ ಅಂಶ ಕಣ್ಣ ಮುಂದೆ ನೇತಾಡುತ್ತಿದೆ

ಇತ್ತೀಚೆಗೆ ದೇಶದಲ್ಲಿ ಹಲವಾರು ಜಾತೀಯ ದಂಗೆಗಳು ನಡೆದಿವೆ. ಅವುಗಳಲ್ಲೆಲ್ಲಾ ಅಲ್ಪ ಮತಸ್ಥರಿಗೆ ಬಹಳ ಹಾನಿಯಾಗಿದೆ. ಕೆಲವು ರಾಜ್ಯಗಳಲ್ಲಿ ಈ ಜಾತೀಯ ವಿಷ ಆಡಳಿತೆಯಲ್ಲಿ ಹೊಕ್ಕಿದೆ ಜಾತ್ಯಾತೀತತೆಯನ್ನೂ ನಿಷ್ಪಕ್ಷಪಾತತನವನ್ನೂ ನಾಶಗೊಳಿಸಿದೆ. ರಾಷ್ಟ್ರೀಯ ಐಕ್ಯತೆಗೆ ನಿಷ್ಠೆಯುಳ್ಳ ಸರಕಾರ ಯಾವ ರೀತಿ ಕೆಲಸ ಮಾಡುತ್ತಿದೆಂಬುದನ್ನು ಪಶ್ಚಿಮ ಬಂಗಾಲದ ಎಡರಂಗ ಸರಕಾರ ತೋರಿಸಿ ಕೊಟ್ಟಿದೆ. ಆ ಸರಕಾರ ಜಾತೀಯ ದಂಗೆಗಳನ್ನು ತಡೆಹಿಡಿಯಲು ಜನತೆಯನ್ನು ಕಾರ್ಯಕ್ರಮಕ್ಕಿಳಿಸಿದೆ.

ಈ ಹೊತ್ತು ಜಾತೀಯ ದಂಗೆಗಳಷ್ಟೇ ನಮಗೆ ಕಾಳಜಿ ಉಂಟುಮಾಡುತ್ತಿರುವುದಲ್ಲ. ಅತಿ ಕೆಟ್ಟ ಭಿದ್ರಕಾರಿ ಚಟುವಟಿಕೆಗಳು ರಾಷ್ಟ್ರೀಯ ಐಕ್ಯತೆಯ ಶಕ್ತಿಗಳನ್ನೆದುರಿಸುತ್ತಿವೆ. ಅವುಗಳೆದುರಿಗೆ ಸರಕಾರ ನಿಶ್ಶಕ್ತವಾಗಿ ನಿಂತಂತಾಗಿದೆ.

ನೈರುತ್ಯ ಭಾಗದಲ್ಲಿ ಪ್ರತ್ಯೇಕತಾವಾದಿಗಳೂ, ಅಭದ್ರಗೊಳಿಸುವ ಶಕ್ತಿಗಳೂ ಸಕ್ರಿಯವಾಗಿವೆ. ತ್ರಿಪುರದ ಎಡರಂಗ ಸರಕಾರ ಅವುಗಳ ವಿರುದ್ಧ ಹೋರಾಡುತ್ತಿದೆ ಆದರೆ ಕೇಂದ್ರ ಸರಕಾರ ಭಿದ್ರಕಾರಿ ಶಕ್ತಿಗಳ ಜೊತೆ ಸೇರಿಕೊಂಡಿದೆ.

ಪಂಜಾಬಿನ ಚುನಾವಣೆ ರಾಷ್ಟ್ರೀಯ ಐಕ್ಯತೆಯ ವಿಜಯವಾಗಿತ್ತು. ಆದರೆ ಕೇಂದ್ರ ಮತ್ತು ಪಂಜಾಬಿನ ಸರಕಾರಗಳು ಜವಾಬ್ದಾರಿಯಿಂದ ವರ್ತಿಸಲಿಲ್ಲ. ಪಂಜಾಬ್ ಒಪ್ಪಂದ ಜಾರಿ ಮಾಡುವಲ್ಲಿ ತಡವಾಗಿದೆ. ತಮಗೆ ಸಿಕ್ಕ ಅಪೂರ್ವ ಬೆಂಬಲದಿಂದ ಭಿದ್ರಕಾರಿ ಶಕ್ತಿಗಳನ್ನೆದುರಿಸಲು ಅಕಾಲಿ ಪಕ್ಷ ಮತ್ತು ಬರ್ನಾಲ ಸರಕಾರ ವಿಫಲವಾಗಿವೆ.

ಸಾಮ್ರಾಜ್ಯಶಾಹಿಗಳ ಬೆಂಬಲದ ಪ್ರತ್ಯೇಕತಾವಾದಿ ಶಕ್ತಿಗಳ ದುರುದ್ದೇಶವನ್ನು ನಾಶ ಮಾಡಿ ಪಂಜಾಬನ್ನೂ ದೇಶದ ಐಕ್ಯತೆಯನ್ನೂ ಈಗಾದರೂ ಉಳಿಸಬಹುದು. ದೇಶಪ್ರೇಮಿಗಳೂ, ಸಾಮ್ರಾಜ್ಯಶಾಹಿ ವಿರೋಧಿಗಳೂ, ಜಾತ್ಯಾತೀತ ಶಕ್ತಿಗಳೆಲ್ಲ ಒಂದಾಗಿ ಪಂಜಾಬ್ ಜನತೆಯೊಡನೆ ಸೇರಿಕೊಂಡು ಭಿದ್ರಕಾರಿ ಶಕ್ತಿಗಳ ಒಳಸಂಚನ್ನು ಸೋಲಿಸಬೇಕು ಈ ಕಾರ್ಯದಲ್ಲಿ ನಮ್ಮ ಪಕ್ಷ ಸಂಪೂರ್ಣ ಬೆಂಬಲ ನೀಡುತ್ತದೆ.

ಪರಿಸ್ಥಿತಿ ಬಹಳ ಗಂಭೀರವಾಗಿದೆಂದು ನನ್ನ ಪಕ್ಷ ಪರಿಗಣಿಸುತ್ತದೆ ಈ ಗಂಭೀರತೆಯನ್ನು ಅರಿತು ಕೊಳ್ಳುವವರ ಜೊತೆಯಲ್ಲಿ ನಾವು ಸೇರಿಕೊಳ್ಳುತ್ತೇವೆ.

ಅಲ್ಪಮತಸ್ಥರೂ, ಬಹುಮತಸ್ಥರೂ ದೇಶದ ಶತ್ರುಗಳೊಡನೆ ಸೇರಿಕೊಳ್ಳುತ್ತಾರೆ. ಅವುಗಳಿಬ್ಬರ ವಿರುದ್ಧವೂ ನಾವು ಹೋರಾಡಬೇಕು

ನಾಲ್ಕನೆಯ ರಾಷ್ಟ್ರೀಯ ಸಮಗ್ರತೆಯ ಕಮಿಟಿ ಇದಾಗಿದೆ. 961ರಲ್ಲಿ ಪ್ರಥಮ ಕಮಿಟಿ ರಚನೆಯಾದಾಗ ಕೂಡ ನಮ್ಮ ಪಕ್ಷ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗೆ ಬೆಂಬಲನೀಡಿತ್ತು. ತಮ್ಮ ಮುಂದಿದ್ದ ಗುರಿಸಾಧಿಸುವಲ್ಲಿ ಹಿಂದಿನ ಕಮಿಟಿಗಳು ವಿಫಲಗೊಂಡಿದ್ದವು. ಇಂದಿನ ಕಮಿಟಿಯಾದರೂ ದೇಶದ ಐಕ್ಯತೆಯನ್ನು ಬಲಗೊಳಿಸಲಿಕ್ಕೆ ಸಹಾಯಕವಾದೀತೆಂದು ಆಶೆ ವ್ಯಕ್ತಮಾಡುತ್ತೇನೆ.

○

ಪಂಜಾಬ್ ರಕ್ಷಿಸಿ ದಿನಾಚರಣೆ

ಕೋಮುವಾದಿ, ಭಿದ್ರಕಾರಿ ಶಕ್ತಿಗಳು ಪಂಜಾಬಿನಲ್ಲಿ ಹಿಂಸಾಕೃತ್ಯದಲ್ಲಿ ತೊಡಗಿದೆ ಸ್ವರ್ಣಮಂದಿರ ಮತ್ತು ಗುರುದ್ವಾರಗಳನ್ನು ದೇಶದ್ರೋಹಿ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಮುಗ್ಧ ಜನರನ್ನು ನಿರ್ದಯವಾಗಿ ಕೊಲ್ಲುತ್ತಿದ್ದಾರೆ ಅಪಾರ ತ್ಯಾಗ ಬಲಿದಾನಗಳ ಮೂಲಕ ಸಂಪಾದಿಸಿರುವ ದೇಶದ ಸ್ವಾತಂತ್ರ್ಯ, ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಕಾಪಾಡಲು ಎಲ್ಲಾ ದೇಶ ಪ್ರೇಮಿ ಜನತೆ, ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಂದಾಗಿ ಹೋರಾಡುವುದು ಅತ್ಯಗತ್ಯ ಪಂಜಾಬ್ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರ ಮತ್ತು ಅಕಾಲಿದಳ ಸರ್ಕಾರಗಳನ್ನು ಒತ್ತಾಯಿಸಿ ಜನಜಾಗೃತಿ ಮೂಡಿಸಲು ದೇಶಾದ್ಯಂತ ಏಪ್ರಿಲ್ 5ರಂದು ಪಂಜಾಬ್ ರಕ್ಷಿಸಿ ದಿನಾಚರಣೆ ಆಚರಿಸಬೇಕೆಂದು ನಾಲ್ಕು ಎಡಪಕ್ಷಗಳು ಕರೆಕೊಟ್ಟಿದ್ದು, ಆ ಕರೆಯಂತೆ ಬೆಂಗಳೂರು, ಶಿವಮೊಗ್ಗ ಮುಂತಾದೆಡೆಗಳಲ್ಲಿ ದಿನಾಚರಣೆ ಆಚರಿಸಲಾಯಿತು. ಬೆಂಗಳೂರಿನಲ್ಲಿ ಸಿ ಪಿ ಐ (ಎಂ) – ಸಿ ಪಿ ಐ ಪಕ್ಷಗಳು ಚಿಕ್ಕಲಾಲ್‌ಬಾಗಿನಿಂದ ಬೃಹತ್ ಮೆರವಣಿಗೆಯಲ್ಲಿ ತೆರಳಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ಶಿವಮೊಗ್ಗದಲ್ಲಿ ಸಿ. ಪಿ. ಐ (ಎಂ) ಕಾರ್ಯಕರ್ತರು ನಗರದ ಪ್ರಮುಖ ಬೀದಿಗಳಲ್ಲಿ ಹಿಂದೂ ಸಿಖ್ ಐಕ್ಯತೆ ಚಿರಾಯುವಾಗಲಿ, ಅಮೇರಿಕನ್ ಸಾಮ್ರಾಜ್ಯಶಾಹಿ ಪಿತೂರಿಗೆ ಧಿಕ್ಕಾರ, ಪಂಜಾಬ್ ಒಪ್ಪಂದದ ಜಾರಿಯಾಗಲಿ ಎಂಬ ಘೋಷಣೆಗಳೊಂದಿಗೆ ಸೈಕಲ್ ಮೆರವಣಿಗೆ ತೆಗೆದಿದ್ದರು.

●

ಬಳ್ಳಾರಿ ಜಿಲ್ಲಾ ರೈತ ಸಮ್ಮೇಳನ

ಕಳೆದ ನಾಲ್ಕು ವರ್ಷಗಳ ಹಿಂದೆ ಕೆಲಸ ಪ್ರಾರಂಭಿಸಿ, ನೀರಾವರಿ, ಬರಗಾಲ ಕಾಮಗಾರಿಗಾಗಿ ಹಲವಾರು ಹೋರಾಟಗಳನ್ನು ನಡೆಸಿರುವ ಬಳ್ಳಾರಿ ಜಿಲ್ಲಾ ರೈತ ಸಂಘದ ಪ್ರಥಮ ಸಮ್ಮೇಳನ ಏಪ್ರಿಲ್ 6–7 ರಂದು ಹರಪನಹಳ್ಳಿಯಲ್ಲಿ ನಡೆಯಿತು. ರಾಜ್ಯ ರೈತ ಸಂಘದ ಅಧ್ಯಕ್ಷರಾದ ರಾಮಚಂದ್ರ ರಾವ್ ಉದ್ಘಾಟನೆ ಮಾಡಿದರು. ಎಸ್. ಕೆ. ಉಪಾಧ್ಯಾಯರು ಮುಖ್ಯ ಅತಿಥಿಗಳಾಗಿದ್ದರು ಇವರಿಬ್ಬರೂ ರೈತ ಚಳುವಳಿಯ ಹಿನ್ನೆಲೆಯನ್ನು ವಿವರಿಸಿ, ರಾಜ್ಯದಲ್ಲಿಯ ರೈತರ ಹೋರಾಟಗಳನ್ನು ತಿಳಿಸಿ ಹೇಳಿ, ರೈತರ ಸಮಸ್ಯೆಗಳ ಪರಿಹಾರಕ್ಕೆ ವಿಶಾಲ ತಳಹದಿಯ ಚಳುವಳಿ ನಡೆಸಬೇಕೆಂದು ಕರೆ ನೀಡಿದರು. ವೆಂಕಟೇಶ ಅವರು ವರದಿ ಮಂಡಿಸಿದರು. ಪರಶುರಾಂ ಅಧ್ಯಕ್ಷರಾಗಿಯೂ, ವೆಂಕಟೇಶ ಕಾರ್ಯದರ್ಶಿಯಾಗಿರುವ ಹೊಸ ಕಮಿಟಿ ಆರಿಸಲಾಯಿತು. ತಾ। 7 ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ರಾಮಚಂದ್ರರಾವ್, ಎಸ್. ಕೆ. ಉಪಾಧ್ಯಾಯ; ವೆಂಕಟೇಶ, ಪರಶುರಾಂ ಅವರೆಲ್ಲ ಮಾತಾಡಿ ದೇಶದ ರಾಜಕೀಯ ಪರಿಸ್ಥಿತಿಯನ್ನೂ ವಿವರಿಸಿ, ಕೇಂದ್ರ ಸರಕಾರದ ಜನ ವಿರೋಧಿ ಧೋರಣೆಗಳ ವಿರುದ್ಧ ತೀವ್ರ ಹೋರಾಟ ಮುಂದುವರಿಸಬೇಕೆಂದೂ ರೈತ ಸಂಘದ ಹೋರಾಟಗಳಿಗೆ ಬೆಂಬಲ ನೀಡಬೇಕೆಂದೂ ಕರೆ ನೀಡಿದರು.

●

ಐಕ್ಯರಂಗ ಮೇ ಶತಾಬ್ದಿ ವಿಶೇಷಾಂಕ

ಈ ವರ್ಷದ ಮೇ ದಿನಾಚರಣೆಯ ಶತಾಬ್ದಿ ವಿಶೇಷಾಂಕವನ್ನು ಆಕರ್ಷಕವಾಗಿ ಛಾಯಾ ಚಿತ್ರಗಳೊಡನೆ ‘ಮ್ಯಾಗಜೀನ್’ ಆಕಾರದಲ್ಲಿ ಪ್ರಕಟಿಸುತ್ತಿದ್ದೇವೆ. 80 ಪುಟಗಳ ಈ ವಿಶೇಷಾಂಕದಲ್ಲಿ ಕಾರ್ಮಿಕ ವರ್ಗದ 100 ವರ್ಷಗಳ ಸಿಸ್ಸೀಮ ಸಾಧನೆಯ ವಿವಿಧ ಮುಖಗಳನ್ನು, ಗೋರ್ಬಾಚೆವ್‌ರವರ ರಾಜಕೀಯ ವರದಿಯ ಭಾಗಗಳನ್ನು ಪ್ರಕಟಿಸಲಿದ್ದೇವೆ. ಯುದ್ಧ ಹಾಗೂ ಶಾಂತಿಗೆ ಮೀಸಲಾದ ಈ ವಿಶೇಷಾಂಕದಲ್ಲಿ ಒಂದು ನಾಟಕ, ಹಾಡುಗಳು, ಮೇ ಕತೆಗಳು ಇರುತ್ತವೆ. ಹೆಚ್ಚಿನ ಪ್ರತಿಗಳಿಗಾಗಿ ಕೂಡಲೇ ಪತ್ರ ಬರೆಯಿರಿ

—ಸಂಪಾದಕ ಮಂಡಲಿ

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560053 Editorial and managerial office, L-56, K. V. Temple Street, Sultanpet B-53 Phone : 7831
Editor P. Ramachandra Rao Managing Editor : N. K. Upadhyaya